भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX अनुभाग 1**
**PART IX SECTION 1**
**ಭಾಗ IX ವಿಭಾಗ 1**

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, बुधवार, 26 मार्च, 2025 | फाल्गुन 27, 1946 (शक) | खंड.56 |
| No.1, New Delhi, Wednesday, March 26, 2025 | Phalguna 27, 1946 (saka) | Vol. 56 |
| ನಂ.1, ನವದೆಹಲಿ, ಬುಧವಾರ, ಮಾರ್ಚ್ 26, 2025 | ಫಾಲ್ಗುಣ 27, 1946 (ಶಕ) | ಸಂಪುಟ.56 |


**Ministry of Law and Justice**
(Legislative Department)
New Delhi, 26th March, 2025

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 26ನೇ ಮಾರ್ಚ್, 2025**

The Translation in Kannada of the following Acts, namely:- (1) THE BIOLOGICAL DIVERSITY ACT, 2002 (NO.18 OF 2003), (2) THE FISCAL RESPONSIBILITY AND BUDGET MANAGEMENT ACT, 2003 (NO.39 OF 2003), (3) THE TRANSGENDER PERSONS (PROTECTION OF RIGHTS) ACT, 2019 (NO.40 OF 2019), (4) THE WHISTLE BLOWERS PROTECTION ACT, 2014 (NO.17 OF 2014) - is hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಜೈವಿಕ ವೈವಿಧ್ಯತೆ ಅಧಿನಿಯಮ, 2002 (2003ರ ಸಂಖ್ಯೆ 18), (2) ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ ಅಧಿನಿಯಮ, 2003 (2003ರ ಸಂಖ್ಯೆ 39), (3) ತೃತೀಯಲಿಂಗಿ ವ್ಯಕ್ತಿಗಳ (ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019ರ ಸಂಖ್ಯೆ 40), (4) ಮಾಹಿತಿದಾರರ ಸಂರಕ್ಷಣಾ ಅಧಿನಿಯಮ, 2014 (2014ರ ಸಂಖ್ಯೆ 17)– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಜೈವಿಕ ವೈವಿಧ್ಯತೆ ಅಧಿನಿಯಮ, 2002

## (2003ರ ಸಂಖ್ಯೆ 18)

*[5ನೇ ಫೆಬ್ರವರಿ, 2003.]*

ಜೈವಿಕ ವೈವಿಧ್ಯತೆಗಳ ಸಂರಕ್ಷಣೆಗಾಗಿ, ಅವುಗಳ ಪೂರಕ ಅಂಶಗಳ ಸುಸ್ಥಿರ ಬಳಕೆಗಾಗಿ ಮತ್ತು ಜೈವಿಕ ಸಂಪನ್ಮೂಲಗಳ ಹಾಗೂ ಜ್ಞಾನದ ಬಳಕೆಯಿಂದ ದೊರೆಯುವ ಪ್ರಯೋಜನಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಸಮ್ಮತವಾಗಿ ಹಂಚಿಕೊಳ್ಳುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತವು ಜೈವಿಕ ವೈವಿಧ್ಯತೆ ಮತ್ತು ಅದಕ್ಕೆ ಸಂಬಂಧಿಸಿರುವ ಸಾಂಪ್ರದಾಯಿಕ ಮತ್ತು ಸಮಕಾಲೀನ ಜ್ಞಾನ ಪದ್ಧತಿಯಲ್ಲಿ ಸಮೃದ್ಧವಾಗಿರುವುದರಿಂದ;

ಮತ್ತು ದಿನಾಂಕ 05ನೇ ಜೂನ್, 1992 ರಂದು ರಿಯೋ ಡಿ ಜನೈರೋದಲ್ಲಿ ನಡೆದ ವಿಶ್ವಸಂಸ್ಥೆಯ ಜೈವಿಕ ವೈವಿಧ್ಯತೆ ಒಡಂಬಡಿಕೆಗೆ ಭಾರತವು ಪಕ್ಷಕಾರನಾಗಿ ಸಹಿ ಮಾಡಿರುವುದರಿಂದ;

ಮತ್ತು ಸದರಿ ಒಡಂಬಡಿಕೆಯು 29ನೇ ಡಿಸೆಂಬರ್, 1993 ರಿಂದ ಜಾರಿಗೆ ಬಂದಿರುವುದರಿಂದ;

ಮತ್ತು ಸದರಿ ಒಡಂಬಡಿಕೆಯಲ್ಲಿ ಭಾಗಿಯಾದ ರಾಷ್ಟ್ರಗಳು ತಮ್ಮ ಜೈವಿಕ ಸಂಪನ್ಮೂಲಗಳ ಮೇಲೆ ತಮ್ಮದೇ ಸಾರ್ವಭೌಮ ಹಕ್ಕುಗಳನ್ನು ಹೊಂದಿರುತ್ತವೆಂದು ಪುನರ್ ದೃಢೀಕರಿಸಿರುವುದರಿಂದ;

ಮತ್ತು ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಅದರ ಪೂರಕ ಅಂಶಗಳ ಸುಸ್ಥಿರ ಬಳಕೆಯಿಂದ ಮತ್ತು ತಳಿ ಸಂಪನ್ಮೂಲಗಳ ಬಳಕೆಯಿಂದ ದೊರೆಯುವ ಪ್ರಯೋಜನಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಸಮ್ಮತವಾಗಿ ಹಂಚಿಕೊಳ್ಳುವುದೇ ಸದರಿ ಒಡಂಬಡಿಕೆಯ ಮುಖ್ಯ ಉದ್ದೇಶವಾಗಿರುವುದರಿಂದ;

ಮತ್ತು 29ನೇ ಅಕ್ಟೋಬರ್, 2010ರಂದು ಜಪಾನಿನ ನಗೋಯಾದಲ್ಲಿ ಅಳವಡಿಸಿಕೊಳ್ಳಲಾದ ಜೈವಿಕ ವೈವಿಧ್ಯತೆಯ ಒಡಂಬಡಿಕೆಯಲ್ಲಿ, ತಳಿ ಸಂಪನ್ಮೂಲಗಳಿಗೆ ಮತ್ತು ಅವುಗಳ ಬಳಕೆಯಿಂದ ದೊರೆಯುವ ಪ್ರಯೋಜನಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಸಮ್ಮತವಾಗಿ ಹಂಚಿಕೆಯನ್ನು ಪಡೆದುಕೊಳ್ಳುವಿಕೆಯ ಕುರಿತ ನಗೋಯಾ ಶಿಷ್ಟಾಚಾರಕ್ಕೆ ಭಾರತವು ಪಕ್ಷಕಾರವಾಗಿರುವುದರಿಂದ;

ಮತ್ತು ಜೈವಿಕ ವೈವಿಧ್ಯತೆಗಳ ಸಂರಕ್ಷಣೆಗೆ, ಸುಸ್ಥಿರ ಬಳಕೆಗೆ ಮತ್ತು ಜೈವಿಕ ಸಂಪನ್ಮೂಲಗಳ ಉಪಯೋಗದಿಂದ ದೊರೆಯುವ ಪ್ರಯೋಜನಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಸಮ್ಮತವಾಗಿ ಹಂಚಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುವುದು ಹಾಗೂ ಸದರಿ ಒಡಂಬಡಿಕೆಯನ್ನು ಜಾರಿಗೆ ತರುವುದು ಅವಶ್ಯಕವಾಗಿದೆಯೆಂದು ಪರಿಗಣಿಸಿರುವುದರಿಂದ;

ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಜೈವಿಕ ವೈವಿಧ್ಯತೆ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಸರ್ಕಾರಿ ರಾಜಪತ್ರದಲ್ಲಿ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗೆ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಅಂಥ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಸಂಬಂಧಿಸಿದಂತೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪಡೆದುಕೊಳ್ಳುವಿಕೆ" (access) ಎಂದರೆ, ಸಂಶೋಧನೆ ಅಥವಾ ಜೈವಿಕ ಸಮೀಕ್ಷೆ ಅಥವಾ ವಾಣಿಜ್ಯ ಬಳಕೆಯ ಉದ್ದೇಶಗಳಿಗಾಗಿ ಭಾರತದಲ್ಲಿ ದೊರೆಯುವ ಅಥವಾ ಭಾರತದಿಂದ ಪಡೆದುಕೊಂಡ ಯಾವುದೇ ಜೈವಿಕ ಸಂಪನ್ಮೂಲ ಅಥವಾ ಅದಕ್ಕೆ ಸಂಬಂಧಪಟ್ಟ ಸಾಂಪ್ರದಾಯಿಕ ಜ್ಞಾನವನ್ನು ಸಂಗ್ರಹಿಸುವುದು, ಶೇಖರಿಸುವುದು ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು;

(ಎಎ) "ಪ್ರಯೋಜನದ ಕ್ಲೇಮುದಾರರು" ಎಂದರೆ, ಜೈವಿಕ ಸಂಪನ್ಮೂಲಗಳ ಮತ್ತು ಅವುಗಳ ಉಪ–ಉತ್ಪನ್ನಗಳ ಸಂರಕ್ಷಕರು, ಅಂಥ ಜೈವಿಕ ಸಂಪನ್ಮೂಲಗಳ ಬಳಕೆಗೆss ಸಂಬಂಧಪಟ್ಟ ಸಾಂಪ್ರದಾಯಿಕ ಜ್ಞಾನವನ್ನು (ಭಾರತೀಯರಿಗಾಗಿ ಮಾತ್ರ ಕ್ರೋಢೀಕೃತ ಸಾಂಪ್ರದಾಯಿಕ ಜ್ಞಾನವನ್ನು ಹೊರತುಪಡಿಸಿ) ಮತ್ತು ಮಾಹಿತಿಯನ್ನು ಮತ್ತು ಅಂಥ ಬಳಕೆಗೆ ಮತ್ತು ಅನ್ವಯಕ್ಕೆ ಸಂಬಂಧಿಸಿದಂತೆ ನಾವೀನ್ಯತೆಯನ್ನು ಮತ್ತು ಪದ್ಧತಿಗಳನ್ನು ಸೃಷ್ಟಿಸುವವರು ಮತ್ತು ಹೊಂದಿರುವವರು;

(ಬಿ) "ಜೈವಿಕ ವೈವಿಧ್ಯತೆ" ಅಥವಾ "ಜೀವ ವೈವಿಧ್ಯತೆ" ಎಂದರೆ, ಎಲ್ಲಾ ಮೂಲಗಳಲ್ಲಿ ಈತನಕ ಸಜೀವಿಗಳಲ್ಲಿ ಆಗಿರುವ ಪರಿವರ್ತನೀಯತೆ ಮತ್ತು ಸಜೀವಿಗಳು ಯಾವ ಜೀವ ಪರಿಸರ ಜಾಲದ ಭಾಗವಾಗಿರುವವೋ ಆ ಜಾಲ ಮತ್ತು ಅದು ಪ್ರಭೇದಗಳಲ್ಲಿ ತಮ್ಮತಮ್ಮಲ್ಲೇ ಇರುವ ಅಥವಾ ಪ್ರಭೇದಗಳ ನಡುವೆ ಇರುವ ಮತ್ತು ಪರಿಸರ ವ್ಯವಸ್ಥೆಗಳಲ್ಲಿರುವ ವೈವಿಧ್ಯತೆಯನ್ನು ಒಳಗೊಳ್ಳುತ್ತದೆ;

(ಸಿ) "ಜೈವಿಕ ಸಂಪನ್ಮೂಲಗಳು" ಎಂಬ ಪದಾವಳಿಯೂ ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಾಣು ಜೀವಿಗಳು ಅಥವಾ ಅವುಗಳ ಜೀವೋತ್ಪತ್ತಿ ವಸ್ತುಗಳ ಭಾಗಗಳು ಮತ್ತು ವಾಸ್ತವದ ಅಥವಾ ಸಂಭಾವ್ಯ ಉಪಯೋಗವುಳ್ಳ ಅಥವಾ ಮಾನವೀಯತೆಯ ಮೌಲ್ಯವುಳ್ಳ ಉತ್ಪನ್ನಗಳನ್ನು (ಮೌಲ್ಯವರ್ಧಿತ ಉತ್ಪನ್ನಗಳನ್ನು ಹೊರತುಪಡಿಸಿ) ಒಳಗೊಳ್ಳುತ್ತದೆ, ಆದರೆ ಇದು ಮಾನವ ಜೀವೋತ್ಪತ್ತಿ ವಸ್ತುಗಳನ್ನು ಒಳಗೊಳ್ಳುವುದಿಲ್ಲ;

(ಡಿ) "ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆ" ಎಂದರೆ, ಯಾವುದೇ ಉದ್ದೇಶಕ್ಕಾಗಿ ಪ್ರಭೇದಗಳ, ಉಪಪ್ರಭೇದಗಳ, ವಂಶವಾಹಿಗಳ, ಜೈವಿಕ ಸಂಪನ್ಮೂಲಗಳ ಪೂರಕ ಅಂಶಗಳ ಮತ್ತು ಸಾರಗಳ ಸಮೀಕ್ಷೆ ಅಥವಾ ಸಂಗ್ರಹಣೆ ಮತ್ತು ಇದು ಗುಣಲಕ್ಷಣ ವರ್ಣನೆ, ಆವಿಷ್ಕರಣೆ ಮತ್ತು ಜೈವಿಕ ವಿಶ್ಲೇಷಣೆಯನ್ನು ಒಳಗೊಳ್ಳುತ್ತದೆ;

(ಇ) "ಅಧ್ಯಕ್ಷ" ಎಂದರೆ, ಸಂದರ್ಭಾನುಸಾರ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷರು;

(ಇಎ) "ಕ್ರೋಢೀಕೃತ ಸಾಂಪ್ರದಾಯಿಕ ಜ್ಞಾನ" ಎಂದರೆ, ಔಷಧಿಗಳ ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940 (1940ರ 23)ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿಕೃತ ಪುಸ್ತಕಗಳಿಂದ ಪಡೆಯಲಾದ ಜ್ಞಾನ;

(ಎಫ್) "ವಾಣಿಜ್ಯ ಬಳಕೆ" ಎಂದರೆ, ವಾಣಿಜ್ಯ ಬಳಕೆಗಾಗಿ ತಳಿ ಆವಿಷ್ಕರಣೆಯ ಮೂಲಕ ಬೆಳೆಗಳನ್ನು ಮತ್ತು ಜಾನುವಾರುಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಬಳಸಿದ ಔಷಧಗಳು, ಕೈಗಾರಿಕಾ ಕಿಣ್ವಗಳು, ಆಹಾರ ರುಚಿಕಾರಕಗಳು, ಪರಿಮಳಗಳು, ಪ್ರಸಾಧನಗಳು, ಹಾಲಂಧಕಗಳು, ತೈಲರಾಳಗಳು, ಬಣ್ಣಗಳು, ಸಾರಗಳು ಮತ್ತು ವಂಶವಾಹಿಯಂತಹ ಜೈವಿಕ

ಸಂಪನ್ಮೂಲಗಳ ಅಂತಿಮ ಬಳಕೆ, ಆದರೆ ಇದು ಕೃಷಿ, ತೋಟಗಾರಿಕೆ, ಕೋಳಿಸಾಕಣೆ, ಹೈನುಗಾರಿಕೆ, ಪಶು ಸಂಗೋಪನೆ ಅಥವಾ ಜೇನುಸಾಕಣೆಯಲ್ಲಿ ಬಳಕೆಯಲ್ಲಿರುವ ಸಾಂಪ್ರದಾಯಿಕ ತಳಿ ಸಂವರ್ಧನೆ ಅಥವಾ ರೂಢಿಗತ ಪದ್ಧತಿಗಳನ್ನು ಒಳಗೊಳ್ಳುವುದಿಲ್ಲ;

(ಎಫ್ಎ) "ಉತ್ಪನ್ನ" ಎಂದರೆ, ಅನುವಂಶಿಕವಾಗಿ ಕ್ರಿಯಾತ್ಮಕ ಘಟಕಗಳನ್ನು ಒಳಗೊಳ್ಳದಿದ್ದರೂ, ನೈಸರ್ಗಿಕವಾಗಿ ಘಟಿಸುವ ಜೀವ-ರಾಸಾಯನಿಕ ಸಂಯೋಜನೆ ಅಥವಾ ಜೈವಿಕ ಸಂಪನ್ಮೂಲಗಳ ಚಯಾಪಚಯ;

(ಜಿ) "ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಪ್ರಯೋಜನದ ಹಂಚಿಕೆ" ಎಂದರೆ, 21ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ನಿರ್ಧರಿಸಿದಂತೆ ಪ್ರಯೋಜನಗಳನ್ನು ಹಂಚಿಕೆ ಮಾಡುವುದು;

(ಜಿಎ) "ನಾಟಿ ಪ್ರಭೇದ" ಎಂದರೆ, ರೈತರು ಅಭಿವೃದ್ಧಿಪಡಿಸಿದ, ಬೆಳೆಸಿದ ಮತ್ತು ಅವರು ಪರಸ್ಪರ ಅನೌಪಚಾರಿಕವಾಗಿ ವಿನಿಮಯ ಮಾಡಿಕೊಂಡ, ಸಾಗುವಳಿ ಮಾಡಿದ ಸಸ್ಯ ಪ್ರಭೇದ;

(ಜಿಬಿ) "ಭಾರತ" ಎಂದರೆ, ಸಂವಿಧಾನದ 1ನೇ ಅನುಚ್ಛೇದದಲ್ಲಿ ಉಲ್ಲೇಖಿಸಿದಂತೆ, ಭಾರತದ ರಾಜ್ಯಕ್ಷೇತ್ರ, ರಾಜ್ಯಕ್ಷೇತ್ರೀಯ ಸಮುದ್ರ, ಭೂ ಖಂಡದ ಅಂಚಿನಲ್ಲಿರುವ ಆಳವಿಲ್ಲದ ಸಮುದ್ರದ ತಳಭಾಗ, ಪ್ರತ್ಯೇಕ ಆರ್ಥಿಕ ಕ್ಷೇತ್ರ ಮತ್ತು ಇತರ ಸಮುದ್ರೀಯ ವಲಯಗಳ ಅಧಿನಿಯಮ, 1976 (1976ರ 80)ರಲ್ಲಿ ಉಲ್ಲೇಖಿಸಿದಂತೆ ಅದರ ರಾಜ್ಯಕ್ಷೇತ್ರೀಯ ಸಮುದ್ರ, ಸಮುದ್ರತಳ ಮತ್ತು ಅಂಥ ಸಮುದ್ರಗಳ ಮೂಲವಾಗಿರುವ ಉಪ-ಮಣ್ಣು, ಭೂ ಖಂಡದ ಅಂಚಿನಲ್ಲಿರುವ ಆಳವಿಲ್ಲದ ಸಮುದ್ರದ ತಳಭಾಗ, ಪ್ರತ್ಯೇಕ ಆರ್ಥಿಕ ಕ್ಷೇತ್ರ ಅಥವಾ ಇತರ ಯಾವುದೇ ಸಮುದ್ರೀಯ ವಲಯ ಮತ್ತು ಅದರ ರಾಜ್ಯಕ್ಷೇತ್ರದ ಮೇಲಿನ ವಾಯು ಪ್ರದೇಶ;

(ಜಿಸಿ) "ದೇಶೀಯ ತಳಿ" ಎಂದರೆ, ಪ್ರಾಚೀನ ಕಾಲದ ರೈತರು ಹಾಗೂ ಅವರ ಪೀಳಿಗೆಯವರು ಬೆಳೆಯುತ್ತಿದ್ದ ಪುರಾತನ ಕಾಲದ ಕೃಷಿ ಪ್ರಭೇದ;

(ಹೆಚ್) "ಸ್ಥಳೀಯ ಸಂಸ್ಥೆಗಳು" ಎಂದರೆ, ಸಂವಿಧಾನದ 243ಬಿ ಅನುಚ್ಛೇದದ (1)ನೇ ಖಂಡದ ಮತ್ತು 243ಕ್ಯೂ ಅನುಚ್ಛೇದದ (1)ನೇ ಖಂಡದ ಅರ್ಥವ್ಯಾಪ್ತಿಯೊಳಗೆ ಬರುವ, ಯಾವುದೇ ಹೆಸರಿನಿಂದ ಕರೆಯಲಾಗುವ ಪಂಚಾಯಿತಿಗಳು ಮತ್ತು ಪುರಸಭೆಗಳು ಮತ್ತು ಯಾವುವೇ ಪಂಚಾಯಿತಿಗಳು ಮತ್ತು ಪುರಸಭೆಗಳು ಇಲ್ಲದಿರುವಾಗ ಸಂವಿಧಾನದ ಅಥವಾ ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ರಚಿತವಾದ ಸ್ವಯಂ-ಆಡಳಿತ ಸಂಸ್ಥೆಗಳು;

(ಐ) "ಸದಸ್ಯ" ಎಂದರೆ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಸದಸ್ಯ ಮತ್ತು ಇದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಐಎ) "ಸದಸ್ಯ-ಕಾರ್ಯದರ್ಶಿ" ಎಂದರೆ, ಸಂದರ್ಭಾನುಸಾರ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಪೂರ್ಣಕಾಲಿಕ ಕಾರ್ಯದರ್ಶಿ;

(ಜೆ) "ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ" ಎಂದರೆ, 8ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ;

(ಕೆ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳು;

(ಎಂ) "ಸಂಶೋಧನೆ" ಎಂದರೆ, ಯಾವುದೇ ಬಳಕೆಗಾಗಿ ಉತ್ಪನ್ನಗಳನ್ನು ತಯಾರಿಸಲು ಅಥವಾ ಸಂಸ್ಕರಣೆಗಳನ್ನು ಮಾರ್ಪಾಟು ಮಾಡಲು ಜೈವಿಕ ಪದ್ಧತಿಗಳು, ಸಜೀವಿಗಳು ಅಥವಾ ಅವುಗಳಿಂದ ಉತ್ಪತ್ತಿಯಾದವುಗಳನ್ನು ಉಪಯೋಗಿಸಿಕೊಂಡು ಮಾಡುವ ಯಾವುದೇ ಜೈವಿಕ ಸಂಪನ್ಮೂಲ ಅಥವಾ ತಂತ್ರಜ್ಞಾನ ಅನ್ವಯದ ಅಧ್ಯಯನ ಅಥವಾ ಕ್ರಮಬದ್ಧ ಅನ್ವೇಷಣೆ;

(ಎನ್) "ರಾಜ್ಯ ಜೀವ ವೈವಿಧ್ಯ ಮಂಡಳಿ" ಎಂದರೆ, 22ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಜ್ಯ ಜೀವ ವೈವಿಧ್ಯ ಮಂಡಳಿ;

(ಓ) "ಸುಸ್ಥಿರ ಬಳಕೆ" ಎಂದರೆ, ಜೈವಿಕ ವೈವಿಧ್ಯತೆಯು ದೀರ್ಘಕಾಲದಲ್ಲಿಯೂ ಇಳಿಮುಖವಾಗಲು ಆಸ್ಪದ ನೀಡದಂಥ ರೀತಿಯಲ್ಲಿ ಮತ್ತು ಅಂಥ ಪ್ರಮಾಣದಲ್ಲಿ ಜೈವಿಕ ವೈವಿಧ್ಯತೆಯ ಪೂರಕ ಅಂಶಗಳನ್ನು ಬಳಸುವ ಮೂಲಕ ಇಂದಿನ ಮತ್ತು ಮುಂದಿನ ಪೀಳಿಗೆಗಳ ಅಗತ್ಯತೆಗಳನ್ನು ಮತ್ತು ಆಕಾಂಕ್ಷೆಗಳನ್ನು ಪೂರೈಸುವಂತೆ ಅದರ ಸಾಮರ್ಥ್ಯವನ್ನು ಕಾಪಾಡುವುದು;

(ಪಿ) "ಮೌಲ್ಯವರ್ಧಿತ ಉತ್ಪನ್ನಗಳು" ಎಂದರೆ, ಗುರುತು ಹಿಡಿಯಲಾಗದಂಥ ಮತ್ತು ಭೌತಿಕವಾಗಿ ಬೇರ್ಪಡಿಸಲಾಗದಂಥ ರೀತಿಯಲ್ಲಿ ಸಸ್ಯಗಳ ಮತ್ತು ಪ್ರಾಣಿಗಳ ಭಾಗಗಳನ್ನು ಅಥವಾ ಸಾರವನ್ನು ಒಳಗೊಂಡಿರಬಹುದಾದಂಥ ಉತ್ಪನ್ನಗಳು.

## ಅಧ್ಯಾಯ II

## ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವಿಕೆಯ ಸಂಬಂಧದ ವಿನಿಯಮನ

**3. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಕೆಲವು ವ್ಯಕ್ತಿಗಳು ಜೀವ ವೈವಿಧ್ಯ ಸಂಬಂಧೀ ಚಟುವಟಿಕೆಗಳನ್ನು ಕೈಗೊಳ್ಳದಿರುವುದು.–** (1) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾರೇ ವ್ಯಕ್ತಿಯು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ಸಂಶೋಧನೆಗೆ ಅಥವಾ ವಾಣಿಜ್ಯ ಬಳಕೆಗೆ ಅಥವಾ ಜೈವಿಕ ಸಮೀಕ್ಷೆಗೆ ಮತ್ತು ಜೈವಿಕ ಬಳಕೆಗಾಗಿ ಭಾರತದಲ್ಲಿ ದೊರೆಯುವ ಯಾವುದೇ ಜೈವಿಕ ಸಂಪನ್ಮೂಲ ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆದುಕೊಳ್ಳತಕ್ಕದ್ದಲ್ಲ.

(2) ಈ ಕೆಳಕಂಡ ವ್ಯಕ್ತಿಗಳು (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅನುಮೋದನೆ ಪಡೆಯುವುದು ಅಗತ್ಯವಾಗಿರತಕ್ಕದ್ದು, ಎಂದರೆ:–

(ಎ) ಭಾರತದ ನಾಗರಿಕನಾಗಿರದ ಯಾರೇ ವ್ಯಕ್ತಿ;

(ಬಿ) ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ 2ನೇ ಪ್ರಕರಣದ (30)ನೇ ಖಂಡದಲ್ಲಿ ಪರಿಭಾಷಿಸಿರುವ ಅನಿವಾಸಿ ಭಾರತೀಯ ನಾಗರಿಕ;

(ಸಿ) (i) ಭಾರತದಲ್ಲಿ ನಿಗಮಿತವಾಗಿರದ ಅಥವಾ ನೋಂದಣಿಯಾಗಿರದ; ಅಥವಾ

(ii) ಕಂಪನಿಗಳ ಅಧಿನಿಯಮ, 2013 (2013ರ 18)ರ 2ನೇ ಪ್ರಕರಣದ (27)ನೇ ಖಂಡದ ಅರ್ಥವ್ಯಾಪ್ತಿಯೊಳಗೆ ವಿದೇಶಿಗನ ನಿಯಂತ್ರಣದಲ್ಲಿರುವ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಭಾರತದಲ್ಲಿ ನಿಗಮಿತವಾಗಿರುವ ಅಥವಾ ನೋಂದಣಿಯಾಗಿರುವ

– ನಿಗಮಿತ ನಿಕಾಯ, ಸಂಘ ಅಥವಾ ಸಂಸ್ಥೆ.

**4. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಸಂಶೋಧನೆಯ ಫಲಿತಾಂಶಗಳನ್ನು ಕೆಲವು ವ್ಯಕ್ತಿಗಳಿಗೆ ವರ್ಗಾಯಿಸದಿರುವುದು.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಲಿಖಿತ ಪೂರ್ವಾನುಮೋದನೆ ಇಲ್ಲದೆ ಯಾರೇ ವ್ಯಕ್ತಿ ಅಥವಾ ಸಂಸ್ಥೆಯು ಭಾರತದಲ್ಲಿ ದೊರೆಯುವ ಅಥವಾ ಭಾರತದಿಂದ ಪಡೆದ ಅಥವಾ ಬಳಸಿದ ಯಾವುದೇ ಜೈವಿಕ ಸಂಪನ್ಮೂಲದ ಮೇಲಿನ ಯಾವುದೇ ಸಂಶೋಧನೆಯ ಫಲಿತಾಂಶವನ್ನು ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಭಾರತೀಯರಿಗೆ ಮಾತ್ರ ಕ್ರೋಢೀಕರಿಸಿದ ಸಾಂಪ್ರದಾಯಿಕ ಜ್ಞಾನವನ್ನು ಹೊರತುಪಡಿಸಿ, ಹಣಕಾಸಿನ ಪ್ರತಿಫಲಕ್ಕಾಗಿ ಅಥವಾ ಅನ್ಯಥಾ ಉದ್ದೇಶಕ್ಕಾಗಿ, 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗೆ ಅಥವಾ ನಿಗಮಿತ ನಿಕಾಯಕ್ಕೆ ಹಂಚಿಕೊಳ್ಳತಕ್ಕದ್ದಲ್ಲ ಅಥವಾ ವರ್ಗಾಯಿಸತಕ್ಕದ್ದಲ್ಲ:

ಪರಂತು, ಆರ್ಥಿಕ ಪ್ರಯೋಜನವನ್ನು ಒಳಗೊಂಡಿರುವ ಯಾವುದೇ ವಿಚಾರ ಸಂಕಿರಣ ಅಥವಾ ಕಾರ್ಯಾಗಾರದಲ್ಲಿ ಸಂಶೋಧನಾ ಪ್ರಬಂಧಗಳ ಪ್ರಕಟಣೆ ಅಥವಾ ಜ್ಞಾನದ ಪ್ರಸಾರವು ಕೇಂದ್ರ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳಿಗೆ ಅನುಸಾರವಾಗಿದ್ದರೆ ಈ ಪ್ರಕರಣದ ಉಪಬಂಧವು ಅನ್ವಯವಾಗತಕ್ಕದ್ದಲ್ಲ:

ಮತ್ತು ಪರಂತು, ಸಂಶೋಧನೆಯ ಫಲಿತಾಂಶಗಳನ್ನು ಮತ್ತಷ್ಟು ಸಂಶೋಧನೆಗಾಗಿ ಬಳಸಿದಲ್ಲಿ, ಆಗ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಲ್ಲಿ ನೋಂದಣಿಯಾಗುವುದು ಅಗತ್ಯವಾಗಿರತಕ್ಕದ್ದು:

ಮತ್ತೂ ಪರಂತು, ಸಂಶೋಧನೆಯ ಫಲಿತಾಂಶಗಳನ್ನು ವಾಣಿಜ್ಯ ಉಪಯೋಗಕ್ಕಾಗಿ ಅಥವಾ ಭಾರತದೊಳಗೆ ಅಥವಾ ಹೊರಗೆ ಯಾವುದೇ ಬೌದ್ಧಿಕ ಆಸ್ತಿಹಕ್ಕುಗಳನ್ನು ಪಡೆಯುವುದಕ್ಕಾಗಿ ಬಳಸಿದರೆ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪೂರ್ವನುಮೋದನೆಯನ್ನು ಪಡೆಯುವುದು ಅಗತ್ಯವಾಗಿರತಕ್ಕದ್ದು.

**5. ಕೆಲವು ಸಹಭಾಗಿತ್ವ ಸಂಶೋಧನಾ ಪ್ರಾಜೆಕ್ಟ್‌ಗಳಿಗೆ ಕೆಲವು ಉಪಬಂಧಗಳು ಅನ್ವಯವಾಗದಿರುವುದು.–** (1) ಭಾರತದ ಸರ್ಕಾರಿ ಪ್ರಾಯೋಜಿತ ಸಂಸ್ಥೆಗಳು ಮತ್ತು ಇತರ ದೇಶಗಳಲ್ಲಿರುವ ಅಂಥ ಸಂಸ್ಥೆಗಳನ್ನೊಳಗೊಂಡಂತೆ, ಸಂಸ್ಥೆಗಳ ನಡುವೆ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನದ ವರ್ಗಾವಣೆ ಅಥವಾ ವಿನಿಮಯವನ್ನು ಒಳಗೊಂಡ ಸಹಭಾಗಿತ್ವ ಸಂಶೋಧನಾ ಪ್ರಾಜೆಕ್ಟ್‌ಗಳು (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ್ದರೆ ಅವುಗಳಿಗೆ 3ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿಕೊಂಡ ಒಪ್ಪಂದಗಳನ್ನು ಆಧಾರಿತವಾಗಿರುವ ಮತ್ತು ಜಾರಿಯಲ್ಲಿರುವ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದವುಗಳನ್ನು ಹೊರತುಪಡಿಸಿ, ಎಲ್ಲಾ ಸಹಭಾಗಿತ್ವ ಸಂಶೋಧನಾ ಪ್ರಾಜೆಕ್ಟ್‌ಗಳು, ಒಪ್ಪಂದದ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೆ ಅಥವಾ (3)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಹೊರಡಿಸಲಾದ ಯಾವುದೇ ಮಾರ್ಗಸೂಚಿಗಳಿಗೆ ಅಸಂಗತವಾಗಿರುವಷ್ಟರಮಟ್ಟಿಗೆ ಅನೂರ್ಜಿತವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ಸಹಭಾಗಿತ್ವ ಸಂಶೋಧನಾ ಪ್ರಾಜೆಕ್ಟುಗಳು,–

(ಎ) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಕಾರ್ಯನೀತಿ ಮಾರ್ಗಸೂಚಿಗಳಿಗೆ ಅನುಗುಣವಾಗಿರತಕ್ಕದ್ದು;

(ಬಿ) ಕೇಂದ್ರ ಸರ್ಕಾರದಿಂದ ಅನುಮೋದಿತವಾಗಿರತಕ್ಕದ್ದು.

**6. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಬೌದ್ಧಿಕ ಆಸ್ತಿ ಹಕ್ಕಿಗೆ ಅರ್ಜಿ ಸಲ್ಲಿಸದಿರುವುದು.–** (1) ಭಾರತದ ಹೊರಗೆ ನಿಕ್ಷೇಪಗಾರಗಳಲ್ಲಿ ಸಂಗ್ರಹಿಸಿ ಇಡಲಾದವುಗಳನ್ನು ಒಳಗೊಂಡಂತೆ ಭಾರತದಿಂದ ಪಡೆಯಲಾದ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನದ ಕುರಿತ ಯಾವುದೇ ಸಂಶೋಧನೆ ಅಥವಾ ಮಾಹಿತಿಯನ್ನು ಆಧರಿಸಿ ಮಾಡಲಾದ ಯಾವುದೇ ಆವಿಷ್ಕಾರಕ್ಕೆ ಸಂಬಂಧಿಸಿದಂತೆ, ಭಾರತದಲ್ಲಿ ಅಥವಾ ಭಾರತದ ಹೊರಗೆ ಯಾವುದೇ ಹೆಸರಿನಿಂದ

ಕರೆಯುವ ಯಾವುದೇ ಬೌದ್ಧಿಕ ಆಸ್ತಿ ಹಕ್ಕಿಗಾಗಿ ಅರ್ಜಿ ಸಲ್ಲಿಸುವ 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಬರುವ ಯಾರೇ ವ್ಯಕ್ತಿಯು ಅಥವಾ ಸಂಸ್ಥೆಯು ಅಂಥ ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಮಂಜೂರಾತಿ ನೀಡುವ ಮೊದಲು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

(1ಎ) ಭಾರತದ ಹೊರಗೆ ನಿಕ್ಷೇಪಗಾರಗಳಲ್ಲಿ ಸಂಗ್ರಹಿಸಿ ಇಡಲಾದವುಗಳನ್ನು ಒಳಗೊಂಡಂತೆ ಭಾರತದಿಂದ ಪಡೆಯಲಾದ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನದ ಕುರಿತ ಯಾವುದೇ ಸಂಶೋಧನೆ ಅಥವಾ ಮಾಹಿತಿಯನ್ನು ಆಧರಿಸಿ ಮಾಡಲಾದ ಯಾವುದೇ ಆವಿಷ್ಕಾರಕ್ಕೆ ಸಂಬಂಧಿಸಿದಂತೆ, ಭಾರತದಲ್ಲಿ ಅಥವಾ ಭಾರತದ ಹೊರಗೆ ಯಾವುದೇ ಹೆಸರಿನಿಂದ ಕರೆಯುವ ಯಾವುದೇ ಬೌದ್ಧಿಕ ಆಸ್ತಿ ಹಕ್ಕಿಗಾಗಿ ಅರ್ಜಿ ಸಲ್ಲಿಸುವ 7ನೇ ಪ್ರಕರಣದಲ್ಲಿ ಬರುವ ಯಾರೇ ವ್ಯಕ್ತಿಯು ಅಂಥ ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಮಂಜೂರಾತಿ ನೀಡುವ ಮೊದಲು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಲ್ಲಿ ನೋಂದಣಿಯಾಗತಕ್ಕದ್ದು.

(1ಬಿ) ಭಾರತದ ಹೊರಗೆ ನಿಕ್ಷೇಪಗಾರಗಳಲ್ಲಿ ಸಂಗ್ರಹಿಸಿ ಇಡಲಾದವುಗಳನ್ನು ಒಳಗೊಂಡಂತೆ ಭಾರತದಿಂದ ಪಡೆಯಲಾದ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನದ ಕುರಿತ ಯಾವುದೇ ಸಂಶೋಧನೆ ಅಥವಾ ಮಾಹಿತಿಯನ್ನು ಆಧರಿಸಿ ಮಾಡಲಾದ ಯಾವುದೇ ಆವಿಷ್ಕಾರಕ್ಕೆ ಸಂಬಂಧಿಸಿದಂತೆ, ಭಾರತದಲ್ಲಿ ಅಥವಾ ಭಾರತದ ಹೊರಗೆ ಯಾವುದೇ ಹೆಸರಿನಿಂದ ಕರೆಯುವ ಬೌದ್ಧಿಕ ಆಸ್ತಿ ಹಕ್ಕನ್ನು ಪಡೆದಿರುವ 7ನೇ ಪ್ರಕರಣದಲ್ಲಿ ಬರುವ ಯಾರೇ ವ್ಯಕ್ತಿಯು ವಾಣಿಜ್ಯೀಕರಣದ ಸಮಯದಲ್ಲಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಈ ಪ್ರಕರಣದ ಮೇರೆಗೆ ಅನುಮೋದನೆಯನ್ನು ನೀಡುವಾಗ, ಪ್ರಯೋಜನ ಹಂಚಿಕೆ ಶುಲ್ಕ ಅಥವಾ ಸ್ವಾಮ್ಯ ಶುಲ್ಕ ಅಥವಾ ಎರಡನ್ನೂ ವಿಧಿಸಬಹುದು ಅಥವಾ ಅಂಥ ಹಕ್ಕುಗಳ ವಾಣಿಜ್ಯ ಬಳಕೆಯಿಂದ ಉಂಟಾಗುವ ಹಣಕಾಸಿನ ಲಾಭವನ್ನು ಹಂಚಿಕೊಳ್ಳುವುದೂ ಸೇರಿದಂತೆ ಷರತ್ತುಗಳನ್ನು ವಿಧಿಸಬಹುದು.

(3) ಈ ಪ್ರಕರಣದ ಉಪಬಂಧಗಳು, ಸಸ್ಯ ತಳಿಗಳ ಸಂರಕ್ಷಣೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಮೇರೆಗೆ ಯಾವುದೇ ಹಕ್ಕಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವ ಯಾರೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

(4) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕಾನೂನಿನ ಮೇರೆಗೆ ಯಾವುದೇ ಹಕ್ಕನ್ನು ಮಂಜೂರು ಮಾಡಿರುವಲ್ಲಿ, ಅಂಥ ಹಕ್ಕನ್ನು ಮಂಜೂರು ಮಾಡುವ ಸಂಬಂಧಪಟ್ಟ ಪ್ರಾಧಿಕಾರವು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಅಂಥ ಹಕ್ಕಿನ ಮಂಜೂರಾತಿಯ ದಸ್ತಾವೇಜಿನ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

**7. ಕೆಲವು ಉದ್ದೇಶಗಳಿಗಾಗಿ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕಾಗಿ ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಮುಂಚಿತವಾಗಿ ತಿಳಿಸುವುದು.–** (1) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಬರುವ ವ್ಯಕ್ತಿಯನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು, ಸಂಬಂಧಪಟ್ಟ ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಮುಂಚಿತವಾಗಿಯೇ ತಿಳಿಸಿದ್ದ ಹೊರತು ವಾಣಿಜ್ಯ ಬಳಕೆಗಾಗಿ ಯಾವುದೇ ಜೈವಿಕ ಸಂಪನ್ಮೂಲವನ್ನು ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆಯತಕ್ಕದ್ದಲ್ಲ, ಆದರೆ ಅಂಥ ಪಡೆದುಕೊಳ್ಳುವಿಕೆಯು 23ನೇ ಪ್ರಕರಣದ (ಬಿ) ಖಂಡದ ಮತ್ತು 24ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಈ ಪ್ರಕರಣದ ಉಪಬಂಧಗಳು, ಕ್ರೋಡೀಕೃತ ಸಾಂಪ್ರದಾಯಿಕ ಜ್ಞಾನ, ಕೃಷಿ ಮಾಡಿದ ಔಷಧೀಯ ಸಸ್ಯಗಳಿಗೆ ಮತ್ತು ಅದರ ಉತ್ಪನ್ನಗಳಿಗೆ, ಜೀವ ವೈವಿಧ್ಯದ ಬೆಳೆಗಾರರು ಮತ್ತು ಸಾಗುವಳಿದಾರರೂ ಸೇರಿದಂತೆ ಸ್ಥಳೀಯ ಜನರಿಗೆ ಮತ್ತು ಆ ಪ್ರದೇಶದ ಸಮುದಾಯಗಳಿಗೆ ಮತ್ತು ತಮ್ಮ ಪೋಷಣೆ ಮತ್ತು ಜೀವನೋಪಾಯದ ವೃತ್ತಿಯಾಗಿ ಭಾರತೀಯ ವೈದ್ಯ ಪದ್ಧತಿಗಳನ್ನು ಒಳಗೊಂಡಂತೆ

ದೇಶೀಯ ವೈದ್ಯ ಪದ್ಧತಿಯ ವೃತ್ತಿಯಲ್ಲಿ ತೊಡಗಿರುವ ವೈದ್ಯರಿಗೆ, ಹಕೀಮರಿಗೆ ಮತ್ತು ನೋಂದಾಯಿತ ಆಯುಷ್ ವೃತ್ತಿಗರಿಗೆ ಮಾತ್ರ ಅನ್ವಯವಾಗತಕ್ಕದ್ದಲ್ಲ.

(2) ಕೃಷಿ ಮಾಡಲಾದ ಔಷಧೀಯ ಸಸ್ಯಗಳ ಸಂದರ್ಭದಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಜೀವ ವೈವಿಧ್ಯ ನಿರ್ವಹಣಾ ಸಮಿತಿಯಿಂದ ಆ ಸಸ್ಯಗಳ ಮೂಲದ ಬಗ್ಗೆ ಪ್ರಮಾಣಪತ್ರವನ್ನು ಪಡೆಯಲಾಗಿದ್ದರೆ ಮಾತ್ರ (1)ನೇ ಉಪಪ್ರಕರಣದ ಮೇರೆಗೆ ವಿನಾಯಿತಿ ಲಭ್ಯವಾಗತಕ್ಕದ್ದು.

(3) ಜೀವ ವೈವಿಧ್ಯ ನಿರ್ವಹಣಾ ಸಮಿತಿಯು, ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸಿಕೊಂಡು ಬಂದಿರುವಂಥ ಪುಸ್ತಕಗಳಲ್ಲಿ ಮಾಡಲಾದ ನಮೂದನ್ನು ಆಧರಿಸಿ (2)ನೇ ಉಪಪ್ರಕರಣದ ಮೇರೆಗೆ ಆ ಸಸ್ಯಗಳ ಮೂಲದ ಬಗ್ಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು.

## ಅಧ್ಯಾಯ III

## ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ

**8. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಕ್ಕಾಗಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ನಿಕಾಯವನ್ನು ಸ್ಥಾಪಿಸತಕ್ಕದ್ದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಚರ ಮತ್ತು ಸ್ಥಿರಾಸ್ತಿ ಎರಡನ್ನೂ ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಕೇಂದ್ರ ಕಚೇರಿಯು ಚೆನ್ನೈನಲ್ಲಿರತಕ್ಕದ್ದು ಮತ್ತು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಭಾರತದ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಸ್ಥಾಪಿಸಬಹುದು.

(4) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು, ಎಂದರೆ:–

(ಎ) ಅಧ್ಯಕ್ಷ, ಜೈವಿಕ ವೈವಿಧ್ಯತೆಯ ಸಂರಕ್ಷಣೆಯಲ್ಲಿ ಮತ್ತು ಅದರ ಸುಸ್ಥಿರ ಬಳಕೆಯಲ್ಲಿ ಮತ್ತು ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ಸಾಕಷ್ಟು ಜ್ಞಾನ, ತಜ್ಞತೆ ಮತ್ತು ಅನುಭವವನ್ನು ಹೊಂದಿರುವ, ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಖ್ಯಾತ ವ್ಯಕ್ತಿಯನ್ನು;

(ಬಿ) ಕೇಂದ್ರ ಸರ್ಕಾರದ ಈ ಮುಂದಿನ ಮಂತ್ರಾಲಯಗಳನ್ನು ಪ್ರತಿನಿಧಿಸುವ, ಕೇಂದ್ರ ಸರ್ಕಾರವು ನೇಮಕ ಮಾಡುವ ಹದಿನಾರು ಜನ ಪದನಿಮಿತ್ತ ಸದಸ್ಯರು, ಎಂದರೆ:–

(i) ಕೃಷಿ ಸಂಶೋಧನೆ ಮತ್ತು ಶಿಕ್ಷಣ;

(ii) ಕೃಷಿ ಮತ್ತು ರೈತರ ಕಲ್ಯಾಣ;

(iii) ಆಯುರ್ವೇದ, ಯುನಾನಿ, ಸಿದ್ಧ, ಸೋವಾ ರಿಗ್ಪಾ, ಯೋಗ ಮತ್ತು ನ್ಯಾಚುರೋಪತಿ ಮತ್ತು ಹೋಮಿಯೋಪತಿ;

(iv) ಜೈವಿಕ ತಂತ್ರಜ್ಞಾನ;

(v) ಪರಿಸರ ಮತ್ತು ಹವಾಮಾನ ಬದಲಾವಣೆ;

(vi ) ಅರಣ್ಯಗಳು ಮತ್ತು ವನ್ಯಜೀವಿಗಳು;

(vi i ) ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಪರಿಷತ್ತು;

(vi i i ) ಭೂ ವಿಜ್ಞಾನಗಳು;

(i x) ಪಂಚಾಯತ್ ರಾಜ್;

(x) ವಿಜ್ಞಾನ ಮತ್ತು ತಂತ್ರಜ್ಞಾನ;

(xi ) ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನೆ;

(xi i ) ಬುಡಕಟ್ಟು ವ್ಯವಹಾರಗಳು;

(ಸಿ) ಸರದಿಯ ಆಧಾರದ ಮೇಲೆ ರಾಜ್ಯ ಜೀವ ವೈವಿಧ್ಯ ಮಂಡಳಿಗಳಿಂದ ನಾಲ್ಕು ಜನ ಪ್ರತಿನಿಧಿಗಳನ್ನು;

(ಡಿ) ಜೈವಿಕ ವೈವಿಧ್ಯತೆ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಪ್ರಾಪ್ತವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆ– ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ ಅಥವಾ ಅನುಭವವನ್ನು ಹೊಂದಿರುವ ಕಾನೂನು ತಜ್ಞರು ಮತ್ತು ವಿಜ್ಞಾನಿಗಳನ್ನು ಒಳಗೊಂಡಿರುವ, ಉದ್ಯಮ ಪ್ರತಿನಿಧಿಗಳ, ಜೈವಿಕ ಸಂಪನ್ಮೂಲ ಸಂರಕ್ಷಕರ, ಸೃಷ್ಟಿಸುವವರ ಮತ್ತು ಜ್ಞಾನಧಾರಕರ ಪೈಕಿಯಿಂದ ನೇಮಕ ಮಾಡಲಾಗುವ ಐದು ಜನ ಸರ್ಕಾರೇತರ ಸದಸ್ಯರನ್ನು;

(ಇ) ಜೀವ ವೈವಿಧ್ಯದ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಅನುಭವ ಹೊಂದಿರತಕ್ಕಂಥ, ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಸದಸ್ಯ–ಕಾರ್ಯದರ್ಶಿಯನ್ನು

– ಒಳಗೊಂಡಿರತಕ್ಕದ್ದು.

**9. ಅಧ್ಯಕ್ಷ, ಸದಸ್ಯರು ಮತ್ತು ಸದಸ್ಯ–ಕಾರ್ಯದರ್ಶಿಯವರ ಸೇವಾ ಷರತ್ತುಗಳು.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷ ಮತ್ತು ಇತರ ಸದಸ್ಯರ ಮತ್ತು ಸದಸ್ಯ–ಕಾರ್ಯದರ್ಶಿಯವರ ಪದಾವಧಿ ಮತ್ತು ಸೇವಾ ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

**10. ಅಧ್ಯಕ್ಷನು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕನಾಗಿರುವುದು.–** ಅಧ್ಯಕ್ಷನು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**10ಎ. ಸದಸ್ಯ–ಕಾರ್ಯದರ್ಶಿ.–** (1) ಸದಸ್ಯ–ಕಾರ್ಯದರ್ಶಿಯು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಮುಖ್ಯ ಸಮನ್ವಯ ಅಧಿಕಾರಿ ಮತ್ತು ಸಂಚಾಲಕನಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ನೆರವಾಗತಕ್ಕದ್ದು.

(2) ಸದಸ್ಯ–ಕಾರ್ಯದರ್ಶಿಯು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**11. ಸದಸ್ಯರನ್ನು ತೆಗೆದುಹಾಕುವುದು.–** ಕೇಂದ್ರ ಸರ್ಕಾರವು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಿಂದ ಯಾರೇ ಸದಸ್ಯನನ್ನು, ಅವನು,–

(ಎ) ದಿವಾಳಿ ಎಂದು ನ್ಯಾಯನಿರ್ಣೀತನಾಗಿದ್ದಾನೆಂದು; ಅಥವಾ

(ಬಿ) ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದಾನೆಂದು; ಅಥವಾ

(ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಸಮರ್ಥನಾಗಿದ್ದಾನೆಂದು; ಅಥವಾ

(ಡಿ) ಅವನು ಎಷ್ಟರಮಟ್ಟಿಗೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಅವನು ಆ ಸ್ಥಾನದಲ್ಲಿ ಮುಂದುವರೆದರೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುತ್ತದೆಂದು; ಅಥವಾ

(ಇ) ಸದಸ್ಯನಾಗಿ ಅವನ ಪ್ರಕಾರ್ಯಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವವಿರುವಂಥ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಆರ್ಜಿಸಿದ್ದಾನೆಂದು

– ಅಭಿಪ್ರಾಯಪಟ್ಟರೆ ತೆಗೆದುಹಾಕಬಹುದು.

**12. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸಭೆಗಳು.–** (1) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ನಿಯಮಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು (ತನ್ನ ಸಭೆಗಳಲ್ಲಿನ ಕೋರಂ ಸೇರಿದಂತೆ) ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಧ್ಯಕ್ಷನು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

(3) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಯಾವುದೇ ಸಭೆಗೆ ಯಾವುದೇ ಕಾರಣದಿಂದಾಗಿ ಅಧ್ಯಕ್ಷನು ಗೈರುಹಾಜರಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡಿದ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು ಸಭೆಯಲ್ಲಿ ಹಾಜರಿದ್ದು, ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(5) ಸಭೆಯಲ್ಲಿ ತೀರ್ಮಾನಿಸಬೇಕಾದ ಯಾವುದೇ ವಿಷಯದಲ್ಲಿ ಯಾವುದೇ ರೀತಿಯಲ್ಲಿ, ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಅಥವಾ ವೈಯಕ್ತಿಕವಾಗಿಯಾಗಲಿ ಸಂಬಂಧ ಹೊಂದಿರುವ ಅಥವಾ ಹಿತಾಸಕ್ತಿ ಹೊಂದಿರುವ ಪ್ರತಿಯೊಬ್ಬ ಸದಸ್ಯನು, ತನ್ನ ಸಂಬಂಧದ ಅಥವಾ ಹಿತಾಸಕ್ತಿಯ ಸ್ವರೂಪವನ್ನು ಬಹಿರಂಗಪಡಿಸತಕ್ಕದ್ದು ಮತ್ತು ಹಾಗೆ ಬಹಿರಂಗಪಡಿಸಿದ ತರುವಾಯ ಸಂಬಂಧವುಳ್ಳ ಅಥವಾ ಹಿತಾಸಕ್ತಿಯುಳ್ಳ ಸದಸ್ಯನು ಆ ಸಭೆಗೆ ಹಾಜರಾಗತಕ್ಕದ್ದಲ್ಲ.

(6) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು,–

(ಎ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಲ್ಲಿ ಯಾವುದೇ ಸ್ಥಾನವು ಖಾಲಿ ಇದೆ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿದೆ ಎಂಬ; ಅಥವಾ

(ಬಿ) ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕಾತಿಯಲ್ಲಿ ಯಾವುದೇ ದೋಷವಿದೆ ಎಂಬ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಕಾರ್ಯವಿಧಾನದಲ್ಲಿ ಯಾವುದೇ ಅಕ್ರಮತೆ ಇದೆ ಎಂಬ

– ಕಾರಣ ಮಾತ್ರದಿಂದಲೇ ಅಸಿಂಧುಗೊಳಿಸತಕ್ಕದ್ದಲ್ಲ.

**13. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸಮಿತಿಗಳು.–** (1) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಕೃಷಿ–ಜೀವ ವೈವಿಧ್ಯದ ಕುರಿತು ವ್ಯವಹರಿಸಲು ಒಂದು ಸಮಿತಿಯನ್ನು ರಚಿಸಬಹುದು.

*ವಿವರಣೆ.–* ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಕೃಷಿ–ಜೀವ ವೈವಿಧ್ಯ" ಎಂದರೆ, ಕೃಷಿ ಸಂಬಂಧಿ ಪ್ರಭೇದಗಳ ಮತ್ತು ಅವುಗಳ ವನ್ಯ ಸಂಬಂಧೀ ಪ್ರಭೇದಗಳ ಜೈವಿಕ ವೈವಿಧ್ಯತೆ.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಅದರ ಕರ್ತವ್ಯಗಳ ದಕ್ಷ ನಿರ್ವಹಣೆಗಾಗಿ ಮತ್ತು ಅದರ ಪ್ರಕಾರ್ಯಗಳ ನೆರವೇರಿಕೆಗಾಗಿ ಅದು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸಮಿತಿಗಳನ್ನು ರಚಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿತವಾದ ಸಮಿತಿಯು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸದಸ್ಯರಲ್ಲದ ವ್ಯಕ್ತಿಗಳನ್ನು ತನಗೆ ಸೂಕ್ತವೆನಿಸುವಷ್ಟು ಸಂಖ್ಯೆಯಲ್ಲಿ ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳತಕ್ಕದ್ದು ಮತ್ತು ಹಾಗೆ ಸಹ–ಸದಸ್ಯರನ್ನಾಗಿ ಸೇರಿಸಿಕೊಂಡ ವ್ಯಕ್ತಿಗಳು ಸಮಿತಿಯ ಎಲ್ಲಾ ಸಭೆಗಳಿಗೆ ಹಾಜರಾಗುವ ಮತ್ತು ಅದರ ವ್ಯವಹರಣೆಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ಸಮಿತಿಯ ಸದಸ್ಯರಾಗಿ ನೇಮಕಗೊಂಡಿರುವ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಅಥವಾ ಶುಲ್ಕಗಳನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರತಕ್ಕದ್ದು.

**14. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು.–** (1) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅದು ಅವಶ್ಯಕವೆಂದು ಪರಿಗಣಿಸುವಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಂಥ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ನಿಬಂಧನೆ ಮತ್ತು ಷರತ್ತುಗಳು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**15. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಆದೇಶಗಳ ಮತ್ತು ತೀರ್ಮಾನಗಳ ಅಧಿಪ್ರಮಾಣೀಕರಣ.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಎಲ್ಲ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಧ್ಯಕ್ಷನ ಅಥವಾ ಸದಸ್ಯ–ಕಾರ್ಯದರ್ಶಿಯ ಅಥವಾ ಈ ಬಗ್ಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಬರೆದುಕೊಟ್ಟ ಎಲ್ಲ ಇತರ ಲಿಖಿತ ಪತ್ರಗಳನ್ನು ಈ ಬಗ್ಗೆ ಅದು ಅಧಿಕೃತಗೊಳಿಸಿದ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸದಸ್ಯ–ಕಾರ್ಯದರ್ಶಿ ಅಥವಾ ಒಬ್ಬ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

**16. ಅಧಿಕಾರಗಳ ಪ್ರತ್ಯಾಯೋಜನೆ.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಯಾರೇ ಸದಸ್ಯನಿಗೆ ಅಥವಾ ಸದಸ್ಯ–ಕಾರ್ಯದರ್ಶಿಗೆ, ಅಧಿಕಾರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತಾನು ಅವಶ್ಯವೆಂದು ಭಾವಿಸಬಹುದಾದಂಥ (50ನೇ ಪ್ರಕರಣದ ಮೇರೆಗೆ ಅಪೀಲು ಸಲ್ಲಿಸುವ ಅಧಿಕಾರ ಮತ್ತು 64ನೇ ಪ್ರಕರಣದ ಮೇರೆಗೆ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ) ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

**17. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ವೆಚ್ಚಗಳನ್ನು ಭಾರತದ ಸಂಚಿತ ನಿಧಿಯಿಂದ ಭರಿಸುವುದು.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳನ್ನು ಮತ್ತು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಅಥವಾ ಅವರ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಸಂಬಳ, ಭತ್ಯೆಗಳನ್ನು ಮತ್ತು ನಿವೃತ್ತಿ ವೇತನಗಳನ್ನು ಒಳಗೊಂಡಂತೆ ಆಡಳಿತಾತ್ಮಕ ವೆಚ್ಚಗಳನ್ನು ಭಾರತದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

## ಅಧ್ಯಾಯ IV

## ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**18. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು.–** (1) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ಜೈವಿಕ ಸಂಪನ್ಮೂಲಗಳ ಮತ್ತು ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಪಡೆಯುವುದಕ್ಕಾಗಿ ಮತ್ತು ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯನ್ನು ನಿರ್ಧರಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ವಿನಿಯಮಗಳನ್ನು ರಚಿಸತಕ್ಕದ್ದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪಾಧಿಕಾರವು ಅನುಮೋದನೆಗಳನ್ನು ನೀಡುವ ಅಥವಾ ತಿರಸ್ಕರಿಸುವ ಮೂಲಕ 3ನೇ, 4ನೇ ಮತ್ತು 6ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಯಾವುದೇ ಕಾರ್ಯಚಟುವಟಿಕೆಯನ್ನು ವಿನಿಯಮಿಸುವುದು ಅದರ ಕರ್ತವ್ಯವಾಗಿರತಕ್ಕದ್ದು.

(3) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು,–

(ಎ) ಜೀವ ವೈವಿಧ್ಯದ ಸಂರಕ್ಷಣೆ, ಅದರ ಪೂರಕ ಅಂಶಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಲಭ್ಯವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಬಹುದು;

(ಬಿ) 37ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಜೀವ ವೈವಿಧ್ಯ ಪಾರಂಪರಿಕ ತಾಣಗಳೆಂದು ಅಧಿಸೂಚಿಸಬೇಕಾದ ಜೀವ ವೈವಿಧ್ಯ ಮಹತ್ವದ ಪ್ರದೇಶಗಳ ಆಯ್ಕೆಯಲ್ಲಿ ಮತ್ತು ಅಂಥ ಪಾರಂಪರಿಕ ತಾಣಗಳ ನಿರ್ವಹಣೆಗಾಗಿ ಕೈಗೊಳ್ಳುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಬಹುದು;

(ಬಿಎ) ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಜೀವ ವೈವಿಧ್ಯ ಮಂಡಳಿಗಳಿಗೆ ಸಲಹೆ ನೀಡಬಹುದು;

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಅಗತ್ಯವಿರಬಹುದಾದಂಥ ಇತರ ಕಾರ್ಯಗಳನ್ನು ನೆರವೇರಿಸಬಹುದು.

(4) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪರವಾಗಿ, ಭಾರತದ ಹೊರಗೆ ನಿಕ್ಷೇಪಗಾರಗಳಲ್ಲಿ ಸಂಗ್ರಹಿಸಿ ಇಡಲಾದವುಗಳನ್ನು ಒಳಗೊಂಡಂತೆ, ಭಾರತದಲ್ಲಿ ಕಂಡುಬಂದ ಅಥವಾ ಭಾರತದಿಂದ ಪಡೆದುಕೊಂಡ ಯಾವುದೇ ಜೈವಿಕ ಸಂಪನ್ಮೂಲ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನಗಳ ಬಗ್ಗೆ ಭಾರತದ ಹೊರಗಿನ ಯಾವುದೇ ದೇಶದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಮಂಜೂರು ಮಾಡುವುದನ್ನು ವಿರೋಧಿಸುವುದಕ್ಕೆ ಅಗತ್ಯವಾದ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಹುದು.

## ಅಧ್ಯಾಯ V

## ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅನುಮೋದನೆ

**19. ಕೆಲವು ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅನುಮೋದನೆ.–** (1) ಭಾರತದಲ್ಲಿ ದೊರೆಯುವ ಯಾವುದೇ ಜೈವಿಕ ಸಂಪನ್ಮೂಲವನ್ನು ಅಥವಾ ಅದಕ್ಕೆ ಸಂಬಂಧಪಟ್ಟ ಜ್ಞಾನವನ್ನು ಸಂಶೋಧನೆಗಾಗಿ ಅಥವಾ ವಾಣಿಜ್ಯ ಉಪಯೋಗಕ್ಕಾಗಿ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಪಡೆಯಲು ಉದ್ದೇಶಿಸಿದ ಅಥವಾ ಭಾರತದಲ್ಲಿ ದೊರೆಯುವ ಅಥವಾ ಭಾರತದಿಂದ ಪಡೆದುಕೊಂಡ ಜೈವಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಯಾವುವೇ ಸಂಶೋಧನಾ ಫಲಿತಾಂಶಗಳನ್ನು ವರ್ಗಾಯಿಸುವುದಕ್ಕೆ ಉದ್ದೇಶಿಸಿರುವ 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

(2) 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಭಾರತದಲ್ಲಿಯಾಗಲಿ ಅಥವಾ ಭಾರತದ ಹೊರಗೆ ಆಗಲಿ ಪೇಟೆಂಟ್‌ಗಾಗಿ ಅಥವಾ ಯಾವುದೇ ಇತರ ಬಗೆಯ ಬೌದ್ಧಿಕ ಆಸ್ತಿ ಹಕ್ಕುಗಳಿಗಾಗಿ ಅರ್ಜಿ ಸಲ್ಲಿಸಲು ಉದ್ದೇಶಿಸಿರುವ 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಶುಲ್ಕ ಸಂದಾಯದ ಮೇಲೆ ಮತ್ತು ಅಂಥ ರೀತಿಯಲ್ಲಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬಹುದು.

(2ಎ) 6ನೇ ಪ್ರಕರಣದ (1ಎ) ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು, (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಕೊಳ್ಳತಕ್ಕದ್ದು ಮತ್ತು 6ನೇ ಪ್ರಕರಣದ (1ಬಿ) ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು ವಾಣಿಜ್ಯೀಕರಣದ ಸಮಯದಲ್ಲಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಿಂದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

(3) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡಿದ ನಂತರ ಮತ್ತು ಅವಶ್ಯವಿದ್ದರೆ ಈ ಉದ್ದೇಶಕ್ಕಾಗಿ ರಚಿಸಿದ ತಜ್ಞರ ಸಮಿತಿಯೊಂದಿಗೆ ಸಮಾಲೋಚಿಸಿದ ತರುವಾಯ, ಈ ಬಗ್ಗೆ ಮಾಡಿದ ಯಾವುವೇ ವಿನಿಯಮಗಳಿಗೆ ಒಳಪಟ್ಟು ಮತ್ತು ಸ್ವಾಮ್ಯ ಧನದ ರೂಪದಲ್ಲಿ ಶುಲ್ಕಗಳನ್ನು ವಿಧಿಸುವುದೂ ಸೇರಿದಂತೆ, ಅದು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಆದೇಶದ ಮೂಲಕ ಅನುಮೋದನೆ ನೀಡಬಹುದು ಅಥವಾ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಆ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಬಾಧಿತ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ತಿರಸ್ಕರಣೆಯ ಆದೇಶವನ್ನು ಮಾಡತಕ್ಕದ್ದಲ್ಲ.

(3ಎ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ಅನುಮೋದನೆಯನ್ನು ನೀಡುವಾಗ, ಈ ಬಗ್ಗೆ ರಚಿಸಲಾದ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಪ್ರಯೋಜನದ ಹಂಚಿಕೆಯನ್ನು ನಿರ್ಧರಿಸತಕ್ಕದ್ದು:

ಪರಂತು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಅಂಥ ಕಾರ್ಯಚಟುವಟಿಕೆಯು ಜೀವ ವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಅಥವಾ ಅಂಥ ಕಾರ್ಯಚಟುವಟಿಕೆಯಿಂದ ಲಭ್ಯವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯ

ಉದ್ದೇಶಗಳಿಗೆ ಬಾಧಕವಾಗಿದೆ ಅಥವಾ ತದ್ವಿರುದ್ಧವಾಗಿದೆ ಎಂದು ಅಭಿಪ್ರಾಯಪಟ್ಟರೆ, ಅದು ಆದೇಶದ ಮೂಲಕ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅಂಥ ಯಾವುದೇ ಕಾರ್ಯಚಟುವಟಿಕೆಯನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು:

ಮತ್ತೂ ಪರಂತು, ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ತಿರಸ್ಕರಣೆಯ ಆದೇಶವನ್ನು ಮಾಡತಕ್ಕದ್ದಲ್ಲ.

(4) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ನೀಡಿದ ಅಥವಾ ತಿರಸ್ಕರಿಸಿದ ಪ್ರತಿಯೊಂದು ಅನುಮೋದನೆಯ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

**20. ಸಂಶೋಧನೆಯ ಫಲಿತಾಂಶಗಳ ವರ್ಗಾವಣೆ.–** (1) ಹಣಕಾಸಿನ ಪ್ರತಿಫಲಕ್ಕಾಗಿ ಅಥವಾ ಅನ್ಯಥಾ 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಉಲ್ಲೇಖಿಸಲಾದ ವ್ಯಕ್ತಿಗಳಿಗೆ ಭಾರತದ ಹೊರಗೆ ನಿಕ್ಷೇಪಗಾರಗಳಲ್ಲಿ ಸಂಗ್ರಹಿಸಿ ಇಡಲಾದಂಥವುಗಳನ್ನು ಒಳಗೊಂಡಂತೆ ಭಾರತದಲ್ಲಿ ಕಂಡುಬಂದಿರುವ ಅಥವಾ ಭಾರತದಿಂದ ಪಡೆಯಲಾದ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವವುಗಳನ್ನು ಕುರಿತು ಯಾವುದೇ ಸಂಶೋಧನೆಯ ಫಲಿತಾಂಶಗಳನ್ನು ವರ್ಗಾಯಿಸಲು ಉದ್ದೇಶಿಸಿರುವ ಯಾರೇ ವ್ಯಕ್ತಿ ಅಥವಾ ಸಂಸ್ಥೆಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕ ಸಂದಾಯದ ಮೇಲೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಸಂಶೋಧನೆ ಫಲಿತಾಂಶಗಳನ್ನು ವರ್ಗಾಯಿಸಲು ಉದ್ದೇಶಿಸಿದ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಗಳನ್ನು ಮಾಡಿದ ತರುವಾಯ, ಮಾರ್ಗಸೂಚಿಗಳ ಅನುಸಾರ ಪ್ರಯೋಜನದ ಹಂಚಿಕೆ ಅಥವಾ ಅನ್ಯಥಾ ಒಳಗೊಂಡಂತೆ ತಾನು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಆದೇಶದ ಮೂಲಕ ಅನುಮೋದನೆಯನ್ನು ನೀಡಬಹುದು ಅಥವಾ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ತಿರಸ್ಕರಣೆಯ ಆದೇಶವನ್ನು ಮಾಡತಕ್ಕದ್ದಲ್ಲ.

(4) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ನೀಡಿದ ಅಥವಾ ತಿರಸ್ಕರಿಸಿದ ಪ್ರತಿಯೊಂದು ಅನುಮೋದನೆಯ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

**21. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದಿಂದ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಪ್ರಯೋಜನ ಹಂಚಿಕೆಯ ನಿರ್ಧರಣೆ.–** (1) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ನೀಡಿದ ಅನುಮೋದನೆಗಾಗಿ ಪ್ರಯೋಜನದ ಹಂಚಿಕೆಯನ್ನು ನಿರ್ಧರಿಸುವಾಗ, ಯಾವ ನಿಬಂಧನೆಗಳು ಮತ್ತು ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿದೆಯೋ ಆ ನಿಬಂಧನೆಗಳು ಮತ್ತು ಷರತ್ತುಗಳನ್ನು, ಪಡೆದುಕೊಳ್ಳುವಿಕೆಯ ಜೈವಿಕ ಸಂಪನ್ಮೂಲಗಳ ಬಳಕೆಯಿಂದ, ಅವುಗಳ ಉಪ–ಉತ್ಪನ್ನಗಳಿಂದ, ಅವುಗಳ ಬಳಕೆಗೆ ಮತ್ತು ಅನ್ವಯಗಳಿಗೆ ಸಂಬಂಧಿಸಿದ ಆವಿಷ್ಕಾರಗಳಿಂದ ಮತ್ತು ಪದ್ಧತಿಗಳಿಂದ ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾನದಿಂದ ಲಭ್ಯವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯನ್ನು, ಅಂಥ ಅನುಮೋದನೆಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿ ಅಥವಾ ಜೀವ ವೈವಿಧ್ಯ ಪ್ರಾಧಿಕಾರದ ಪ್ರತಿನಿಧಿಯಾದ ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ನಡುವೆ ಪರಸ್ಪರ ಒಪ್ಪಿಕೊಂಡ ನಿಬಂಧನೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ಸುನಿಶ್ಚಿತಗೊಳಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಬಗ್ಗೆ ರಚಿಸಿದ ಯಾವುವೇ ವಿನಿಯಮಗಳಿಗೆ ಒಳಪಟ್ಟು, ಈ ಮುಂದಿನ ಎಲ್ಲಾ ಅಥವಾ ಯಾವುದೇ ರೀತಿಯಲ್ಲಿ ಜಾರಿಗೊಳಿಸತಕ್ಕ ಪ್ರಯೋಜನದ ಹಂಚಿಕೆಯನ್ನು ನಿರ್ಧರಿಸತಕ್ಕದ್ದು, ಎಂದರೆ:–

(ಎ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಅಥವಾ ಪ್ರಯೋಜನದ ಕ್ಲೇಮುದಾರರನ್ನು ಗುರುತಿಸಲಾಗಿದ್ದಲ್ಲಿ ಅಂಥ ಪ್ರಯೋಜನದ ಕ್ಲೇಮುದಾರರಿಗೆ ಬೌದ್ಧಿಕ ಆಸ್ತಿ ಹಕ್ಕುಗಳ ಜಂಟಿ ಒಡೆತನವನ್ನು ನೀಡುವುದು;

(ಬಿ) ತಂತ್ರಜ್ಞಾನವನ್ನು ವರ್ಗಾಯಿಸುವುದು;

(ಸಿ) ಪ್ರಯೋಜನದ ಕ್ಲೇಮುದಾರರಿಗೆ ಉತ್ತಮ ಮಟ್ಟದ ಜೀವನ ನಡೆಸಲು ಅನುಕೂಲ ಕಲ್ಪಿಸುವಂಥ ಪ್ರದೇಶಗಳಲ್ಲಿ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ ಘಟಕಗಳನ್ನು ಸ್ಥಾಪಿಸುವುದು;

(ಡಿ) ಜೈವಿಕ ಸಂಪನ್ಮೂಲಗಳಿಗೆ ಮತ್ತು ಜೈವಿಕ ಸಮೀಕ್ಷೆಗೆ ಹಾಗೂ ಜೈವಿಕ ಬಳಕೆಗೆ ಸಂಬಂಧಿಸಿದ ಸಂಶೋಧನೆಯಲ್ಲಿ ಮತ್ತು ಅಭಿವೃದ್ಧಿಯಲ್ಲಿ ಭಾರತೀಯ ವಿಜ್ಞಾನಿಗಳನ್ನು, ಪ್ರಯೋಜನದ ಕ್ಲೇಮುದಾರರನ್ನು ಮತ್ತು ಸ್ಥಳೀಯ ಜನರನ್ನು ಸೇರಿಸಿಕೊಳ್ಳುವುದು;

(ಇ) ಪ್ರಯೋಜನದ ಕ್ಲೇಮುದಾರರಿಗೆ ನೆರವು ನೀಡುವುದಕ್ಕಾಗಿ ಸಾಹಸೋದ್ಯಮ ಬಂಡವಾಳ ನಿಧಿಯನ್ನು ಸ್ಥಾಪಿಸುವುದು;

(ಎಫ್) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಅದು ಸೂಕ್ತವೆಂದು ಭಾವಿಸಬಹುದಾದಂಥ ಹಣಕಾಸು ಪರಿಹಾರವನ್ನು ಮತ್ತು ಹಣಕಾಸೇತರ ಪ್ರಯೋಜನಗಳನ್ನು ಕ್ಲೇಮುದಾರರಿಗೆ ಸಂದಾಯ ಮಾಡುವುದು.

(3) ಪ್ರಯೋಜನದ ಹಂಚಿಕೆಯ ರೂಪದಲ್ಲಿ ಯಾವುದೇ ಒಂದು ಹಣದ ಮೊತ್ತಕ್ಕೆ ಆದೇಶಿಸಿದ್ದಲ್ಲಿ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಆ ಮೊತ್ತವನ್ನು ರಾಷ್ಟ್ರೀಯ ಜೀವ ವೈವಿಧ್ಯ ನಿಧಿಯಲ್ಲಿ ಠೇವಣಿ ಇಡುವಂತೆ ನಿರ್ದೇಶಿಸಬಹುದು:

ಪರಂತು, ಜೈವಿಕ ಸಂಪನ್ಮೂಲವನ್ನು ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ವ್ಯಕ್ತಿಯಿಂದ ಅಥವಾ ವ್ಯಕ್ತಿಗಳ ಗುಂಪುಗಳಿಂದ ಅಥವಾ ಸಂಸ್ಥೆಗಳಿಂದ ಪಡೆದುದ್ದಾಗಿದ್ದಲ್ಲಿ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಆ ಮೊತ್ತವನ್ನು ಯಾವುದೇ ಒಪ್ಪಂದದ ನಿಬಂಧನೆಗಳಿಗನುಸಾರವಾಗಿ ಮತ್ತು ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ, ಅಂಥ ಪ್ರಯೋಜನದ ಕ್ಲೇಮುದಾರರಿಗೆ ಅಥವಾ ಸಂಸ್ಥೆಗೆ ನೇರವಾಗಿ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ, ವಿನಿಯಮಗಳ ಮೂಲಕ ಮಾರ್ಗಸೂಚಿಗಳನ್ನು ರಚಿಸತಕ್ಕದ್ದು.

## ಅಧ್ಯಾಯ VI

## ರಾಜ್ಯ ಜೀವ ವೈವಿಧ್ಯ ಮಂಡಳಿ

**22. ರಾಜ್ಯ ಜೀವ ವೈವಿಧ್ಯ ಮಂಡಳಿಯ ಸ್ಥಾಪನೆ.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಬಗ್ಗೆ ನಿಯಮಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಸರ್ಕಾರವು, ––––––– (ರಾಜ್ಯದ ಹೆಸರು) ಜೀವ ವೈವಿಧ್ಯ ಮಂಡಳಿ ಎಂಬ ಹೆಸರಿನಿಂದ ಕರೆಯಲಾಗುವ ರಾಜ್ಯ ಮಂಡಳಿಯನ್ನು ಸ್ಥಾಪಿಸತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವುದೇ ರಾಜ್ಯ ಜೀವ ವೈವಿಧ್ಯ ಮಂಡಳಿಯನ್ನು ರಚಿಸತಕ್ಕದ್ದಲ್ಲ ಮತ್ತು ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಆ ಕೇಂದ್ರಾಡಳಿತ ಪ್ರದೇಶದ ಸಂಬಂಧದಲ್ಲಿ ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:

ಪರಂತು, ಯಾವುದೇ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಅಥವಾ ನಿಕಾಯಕ್ಕೆ ಈ ಉಪಪ್ರಕರಣದ ಮೇರೆಗಿನ ಅದರ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

(3) ಮಂಡಳಿಯು, ಚರ ಮತ್ತು ಸ್ಥಿರಾಸ್ತಿ ಎರಡನ್ನೂ ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಮಂಡಳಿಯು, ಈ ಮುಂದಿನ ಸದಸ್ಯರನ್ನು, ಎಂದರೆ:–

(ಎ) ಅಧ್ಯಕ್ಷ, ಜೈವಿಕ ವೈವಿಧ್ಯತೆಯ ಸಂರಕ್ಷಣೆಯ ಮತ್ತು ಅದರ ಸುಸ್ಥಿರ ಬಳಕೆಯ ಮತ್ತು ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ಸಾಕಷ್ಟು ಜ್ಞಾನ, ತಜ್ಞತೆ ಮತ್ತು ಅನುಭವವನ್ನು ಹೊಂದಿರುವ, ರಾಜ್ಯ ಸರ್ಕಾರವು ನೇಮಕ ಮಾಡುವ ಒಬ್ಬ ಖ್ಯಾತ ವ್ಯಕ್ತಿಯನ್ನು;

(ಬಿ) ಪಂಚಾಯತ್ ರಾಜ್ ಮತ್ತು ಬುಡಕಟ್ಟು ವ್ಯವಹಾರಣೆಗಳ ಇಲಾಖೆಗಳೂ ಸೇರಿದಂತೆ ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳನ್ನು ಪ್ರತಿನಿಧಿಸುವುದಕ್ಕೆ ರಾಜ್ಯ ಸರ್ಕಾರವು ನೇಮಕ ಮಾಡುವ ಏಳು ಜನರಿಗಿಂತ ಹೆಚ್ಚಲ್ಲದ ಪದನಿಮಿತ್ತ ಸದಸ್ಯರನ್ನು;

(ಸಿ) ಜೈವಿಕ ವೈವಿಧ್ಯತೆ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಪ್ರಾಪ್ತವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆ – ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ, ತಜ್ಞತೆ ಮತ್ತು ಕೆಲಸದ ಅನುಭವವನ್ನು ಹೊಂದಿರುವ ತಜ್ಞರು, ಕಾನೂನು ತಜ್ಞರು ಮತ್ತು ವಿಜ್ಞಾನಿಗಳನ್ನು ಒಳಗೊಂಡಿರುವವರ ಪೈಕಿಯಿಂದ ನೇಮಕ ಮಾಡಲಾಗುವ ಐದು ಜನರಿಗಿಂತ ಹೆಚ್ಚಿಲ್ಲದ ಸರ್ಕಾರೇತರ ಸದಸ್ಯರನ್ನು

– ಒಳಗೊಂಡಿರತಕ್ಕದ್ದು.

(5) ರಾಜ್ಯ ಜೀವ ವೈವಿಧ್ಯ ಮಂಡಳಿಯ ಕೇಂದ್ರ ಕಚೇರಿಯು, ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಇರತಕ್ಕದ್ದು.

**23. ರಾಜ್ಯ ಜೀವ ವೈವಿಧ್ಯ ಮಂಡಳಿಯ ಪ್ರಕಾರ್ಯಗಳು.–** ರಾಜ್ಯ ಜೀವ ವೈವಿಧ್ಯ ಮಂಡಳಿಯ ಪ್ರಕಾರ್ಯಗಳು ಈ ಕೆಳಕಂಡಂತೆ ಇರತಕ್ಕದ್ದು,–

(ಎ) ಜೀವ ವೈವಿಧ್ಯದ ಸಂರಕ್ಷಣೆಗೆ, ಅದರ ಪೂರಕ ಅಂಶಗಳ ಸುಸ್ಥಿರ ಬಳಕೆಗೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನದಿಂದ ಲಭ್ಯವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರ ಅಥವಾ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಹೊರಡಿಸಿದ ವಿನಿಯಮಗಳು ಅಥವಾ ಮಾರ್ಗಸೂಚಿಗಳು ಯಾವುದಾದರೂ ಇದ್ದರೆ, ಅಂಥ ವಿನಿಯಮಗಳ ಮತ್ತು ಮಾರ್ಗಸೂಚಿಗಳಿಗೆ ಅನುಸಾರವಾಗಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ಅನುಮೋದನೆಗಳನ್ನು ನೀಡುವ ಅಥವಾ ತಿರಸ್ಕರಿಸುವ ಮೂಲಕ 7ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಕಾರ್ಯಚಟುವಟಿಕೆಯನ್ನು ವಿನಿಯಮಿಸುವುದು;

(ಬಿಎ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಅನುಮೋದನೆಗಳನ್ನು ನೀಡುವಾಗ ಈ ಬಗ್ಗೆ ರಚಿಸಿದ ವಿನಿಯಮಗಳ ಮೇರೆಗೆ ಉಪಬಂಧಿಸಲಾದಂತೆ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯನ್ನು ನಿರ್ಧರಿಸುವುದು;

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಅವಶ್ಯವಾಗಬಹುದಾದಂಥ ಅಥವಾ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

**24. ಸಂರಕ್ಷಣೆ, ಇತ್ಯಾದಿ ಉದ್ದೇಶಗಳನ್ನು ಉಲ್ಲಂಘಿಸುವ ಕೆಲವು ಕಾರ್ಯಚಟುವಟಿಕೆಗಳನ್ನು ನಿರ್ಬಂಧಿಸಲು ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಧಿಕಾರ.–** (1) 7ನೇ ಪ್ರಕರಣದಲ್ಲಿ ಒಳಗೊಂಡ ಯಾವುದೇ ಕಾರ್ಯಚಟುವಟಿಕೆಯನ್ನು ಕೈಗೊಳ್ಳಲು ಉದ್ದೇಶಿಸುವ, 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಮುಂಚಿತವಾಗಿ ತಿಳಿಸಿರತಕ್ಕದ್ದು.

(2) ರಾಜ್ಯ ಜೀವ ವೈವಿಧ್ಯ ಮಂಡಳಿಯು, ಅಂಥ ಕಾರ್ಯಚಟುವಟಿಕೆಯು ಜೀವ ವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಅಥವಾ ಅಂಥ ಕಾರ್ಯಚಟುವಟಿಕೆಯಿಂದ ಲಭ್ಯವಾಗುವ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯ ಉದ್ದೇಶಗಳಿಗೆ ಬಾಧಕವಾಗಿದೆ ಅಥವಾ ತದ್ವಿರುದ್ಧವಾಗಿದೆ ಎಂದು ಅಭಿಪ್ರಾಯಪಟ್ಟರೆ, ಅಂಥ ಯಾವುದೇ ಕಾರ್ಯಚಟುವಟಿಕೆಯನ್ನು ಆದೇಶದ ಮೂಲಕ ನಿರ್ಬಂಧಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ತಿರಸ್ಕರಣೆಯ ಆದೇಶವನ್ನು ಮಾಡತಕ್ಕದ್ದಲ್ಲ.

(3) ರಾಜ್ಯ ಜೀವ ವೈವಿಧ್ಯ ಮಂಡಳಿಯು, ಈ ಪ್ರಕರಣದ ಮೇರೆಗೆ ನೀಡಿದ ಅಥವಾ ತಿರಸ್ಕರಿಸಿದ ಪ್ರತಿಯೊಂದು ಅನುಮೋದನೆಯ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

**25. 9ರಿಂದ 17ನೇ ಪ್ರಕರಣಗಳವರೆಗಿನ ಉಪಬಂಧಗಳು ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಮಾರ್ಪಾಟುಗಳೊಂದಿಗೆ ಅನ್ವಯವಾಗುವುದು.–** 9ರಿಂದ 17ನೇ ಪ್ರಕರಣಗಳವರೆಗಿನ ಉಪಬಂಧಗಳು ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಅನ್ವಯವಾಗತಕ್ಕದ್ದು ಮತ್ತು ಈ ಮುಂದಿನ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು, ಎಂದರೆ:–

(ಎ) ಕೇಂದ್ರ ಸರ್ಕಾರಕ್ಕೆ ಮಾಡಲಾದ ಉಲ್ಲೇಖಗಳನ್ನು ರಾಜ್ಯ ಸರ್ಕಾರಕ್ಕೆ ಮಾಡಲಾದ ಉಲ್ಲೇಖಗಳು ಎಂದು ಅರ್ಥೈಸತಕ್ಕದ್ದು;

(ಬಿ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಮಾಡಲಾದ ಉಲ್ಲೇಖಗಳನ್ನು ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಮಾಡಲಾದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಸಿ) ಭಾರತದ ಸಂಚಿತ ನಿಧಿಗೆ ಮಾಡಲಾದ ಉಲ್ಲೇಖವನ್ನು ರಾಜ್ಯ ಸಂಚಿತ ನಿಧಿಗೆ ಮಾಡಲಾದ ಉಲ್ಲೇಖ ಎಂದು ಅರ್ಥೈಸತಕ್ಕದ್ದು.

## ಅಧ್ಯಾಯ VII

## ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**26. ಕೇಂದ್ರ ಸರ್ಕಾರದಿಂದ ಅನುದಾನಗಳು ಅಥವಾ ಸಾಲಗಳು.–** ಕೇಂದ್ರ ಸರ್ಕಾರವು, ಸಂಸತ್ತು ಈ ಬಗ್ಗೆ ಕಾನೂನಿನ ಮೂಲಕ ಯುಕ್ತ ಧನವಿನಿಯೋಗ ಮಾಡಿದ ನಂತರ, ಅದು ಯುಕ್ತವೆಂದು ಭಾವಿಸಬಹುದಾದಂಥ ಮೊತ್ತದ ಹಣವನ್ನು, ಅನುದಾನಗಳ ಅಥವಾ

ಸಾಲಗಳ ರೂಪದಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸುವುದಕ್ಕಾಗಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

**27. ರಾಷ್ಟ್ರೀಯ ಜೀವ ವೈವಿಧ್ಯ ನಿಧಿಯ ರಚನೆ.–** (1) ರಾಷ್ಟ್ರೀಯ ಜೀವ ವೈವಿಧ್ಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ,–

(ಎ) 26ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ನೀಡಲಾದ ಯಾವುವೇ ಅನುದಾನಗಳು ಮತ್ತು ಸಾಲಗಳನ್ನು;

(ಬಿ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಸ್ವೀಕರಿಸಿದ ಶುಲ್ಕಗಳು ಮತ್ತು ಪ್ರಯೋಜನದ ಹಂಚಿಕೆ ಮೊತ್ತ ಸೇರಿದಂತೆ ಎಲ್ಲಾ ಮೊಬಲಗುಗಳನ್ನು;

(ಸಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಮೂಲಗಳಿಂದ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

(2) ನಿಧಿಯನ್ನು,–

(ಎ) ಪ್ರಯೋಜನದ ಕ್ಲೇಮುದಾರರಿಗೆ ಪ್ರಯೋಜನಗಳನ್ನು ಒದಗಿಸುವುದಕ್ಕೆ;

(ಬಿ) ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಸಂವರ್ಧನೆ ಹಾಗೂ ಸುಸ್ಥಿರ ಬಳಕೆಗೆ;

(ಸಿ) ಜೀವ ವೈವಿಧ್ಯ ನಿರ್ವಹಣಾ ಸಮಿತಿಯೊಡನೆ ಸಮಾಲೋಚಿಸಿ, ಯಾವ ಪ್ರದೇಶಗಳಿಂದ ಅಂಥ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರಾದಾಯಿಕ ಜ್ಞಾನವನ್ನು ಪಡೆಯಲಾದಂಥ ಪ್ರದೇಶಗಳ ಸಮಾಜೋ–ಆರ್ಥಿಕ ಅಭಿವೃದ್ಧಿಗಾಗಿ:

ಪರಂತು, ಯಾವ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಪಡೆಯಲಾಗಿದೆ ಎಂದು ಗುರುತಿಸಲು ಸಾಧ್ಯವಾಗದಿದ್ದಾಗ, ನಿಧಿಯನ್ನು ಅಂಥ ಜೈವಿಕ ಸಂಪನ್ಮೂಲಗಳು ದೊರೆಯುವಂಥ ಪ್ರದೇಶದ ಸಮಾಜೋ–ಆರ್ಥಿಕ ಅಭಿವೃದ್ಧಿಗಾಗಿ;

(ಡಿ) ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವ ಚಟುವಟಿಕೆಗಳಿಗಾಗಿ

– ಬಳಸತಕ್ಕದ್ದು.

**28. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ವಾರ್ಷಿಕ ವರದಿ.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ಲೆಕ್ಕದ ವಿವರಗಳನ್ನು ನೀಡುವ ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರಕ್ಕೆ, ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ, ಲೆಕ್ಕಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು ಅದರ ಮೇಲೆ ಲೆಕ್ಕಪರಿಶೋಧಕರು ನೀಡಿರುವ ವರದಿಯೊಂದಿಗೆ ಒದಗಿಸತಕ್ಕದ್ದು.

**29. ಆಯವ್ಯಯ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಆಯವ್ಯಯವನ್ನು ಸಿದ್ಧಪಡಿಸಿ, ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರೆ ಸೂಕ್ತ ದಾಖಲೆಗಳನ್ನು (ರಾಷ್ಟ್ರೀಯ ಜೀವ

ವೈವಿಧ್ಯ ನಿಧಿಯ ಲೆಕ್ಕಪತ್ರಗಳು ಮತ್ತು ಇತರ ಸೂಕ್ತ ದಾಖಲೆಗಳನ್ನೂ ಒಳಗೊಂಡಂತೆ) ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಭರಿಸಿದ ಯಾವುದೇ ವೆಚ್ಚವನ್ನು ಭಾರತ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನಿಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಸಂದಾಯ ಮಾಡತಕ್ಕದ್ದು.

(3) ಭಾರತ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಮತ್ತು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು, ಸಾಮಾನ್ಯವಾಗಿ ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರುವ ಅವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ವೋಚರುಗಳನ್ನು ಮತ್ತು ಇತರೆ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವುದಕ್ಕೆ ಮತ್ತು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಯಾವುವೇ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಅಥವಾ ಈ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಲೆಕ್ಕಪತ್ರಗಳನ್ನು, ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಪ್ರತಿ ವರ್ಷವೂ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**30. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ, ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಅವುಗಳನ್ನು ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ VIII

## ರಾಜ್ಯ ಜೀವ ವೈವಿಧ್ಯ ಮಂಡಳಿಯ ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**31. ರಾಜ್ಯ ಜೀವ ವೈವಿಧ್ಯ ಮಂಡಳಿಗೆ ರಾಜ್ಯ ಸರ್ಕಾರದಿಂದ ಅನುದಾನ.–** ರಾಜ್ಯ ಸರ್ಕಾರವು, ಈ ಸಂಬಂಧದಲ್ಲಿ ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ಯುಕ್ತ ಧನವಿನಿಯೋಗ ಮಾಡಿದ ನಂತರ, ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಯುಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತವನ್ನು ಅನುದಾನ ಅಥವಾ ಸಾಲಗಳ ರೂಪದಲ್ಲಿ ರಾಜ್ಯ ಸರ್ಕಾರವು ರಾಷ್ಟ್ರೀಯ ಜೀವ ವೈವಿಧ್ಯ ಮಂಡಳಿಗೆ ಸಂದಾಯ ಮಾಡಬಹುದು.

**32. ರಾಜ್ಯ ಜೀವ ವೈವಿಧ್ಯ ನಿಧಿಯ ರಚನೆ.–** (1) ರಾಜ್ಯ ಜೀವ ವೈವಿಧ್ಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ,–

(ಎ) 31ನೇ ಪ್ರಕರಣದ ಮೇರೆಗೆ ರಾಜ್ಯ ಜೀವ ವೈವಿಧ್ಯ ಮಂಡಳಿಗೆ ನೀಡಲಾದ ಯಾವುವೇ ಅನುದಾನಗಳು ಮತ್ತು ಸಾಲಗಳನ್ನು

(ಬಿ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ನೀಡಿದ ಯಾವುದೇ ಅನುದಾನಗಳನ್ನು ಮತ್ತು ಸಾಲಗಳನ್ನು;

(ಸಿ) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಮೂಲಗಳಿಂದ ರಾಜ್ಯ ಜೀವ ವೈವಿಧ್ಯ ಮಂಡಳಿಯು ಸ್ವೀಕರಿಸಿದ ಶುಲ್ಕಗಳು ಮತ್ತು ಪ್ರಯೋಜನಗಳ ಹಂಚಿಕೆಯ ಮೊಬಲಗೂ ಒಳಗೊಂಡಂತೆ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

(2) ರಾಜ್ಯ ಜೀವ ವೈವಿಧ್ಯ ನಿಧಿಯನ್ನು,–

(ಎ) ಪಾರಂಪರಿಕ ತಾಣಗಳ ನಿರ್ವಹಣೆಗೆ ಮತ್ತು ಸಂರಕ್ಷಣೆಗೆ;

(ಎಎ) ಪ್ರಯೋಜನದ ಕ್ಲೇಮುದಾರರಿಗೆ ಪ್ರಯೋಜನಗಳನ್ನು ಒದಗಿಸುವುದಕ್ಕೆ;

(ಬಿ) 37ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯ ಮೂಲಕ ಆರ್ಥಿಕವಾಗಿ ತೊಂದರೆಗೊಳಗಾದ ಯಾವುದೇ ವರ್ಗದ ಜನರಿಗೆ ಪರಿಹಾರ ನೀಡುವುದಕ್ಕೆ ಅಥವಾ ಪುನರ್ವಸತಿ ಕಲ್ಪಿಸುವುದಕ್ಕೆ;

(ಸಿ) ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಸಂವರ್ಧನೆ ಹಾಗೂ ಸುಸ್ಥಿರ ಬಳಕೆಗೆ;

(ಡಿ) ಜೀವ ವೈವಿಧ್ಯ ನಿರ್ವಹಣಾ ಸಮಿತಿಯೊಡನೆ ಮತ್ತು ಸಂಬಂಧಪಟ್ಟ ಸ್ಥಳೀಯ ನಿಕಾಯದೊಂದಿಗೆ ಸಮಾಲೋಚಿಸಿ, ಯಾವ ಪ್ರದೇಶಗಳಿಂದ ಅಂಥ ಜೈವಿಕ ಸಂಪನ್ಮೂಲಗಳ ಅಥವಾ ಅದಕ್ಕೆ ಸಂಬಂಧಿಸಿದ ಸಾಂಪ್ರಾದಾಯಿಕ ಜ್ಞಾನವನ್ನು ಪಡೆಯಲಾದಂಥ ಪ್ರದೇಶಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ:

ಪರಂತು, ಯಾವ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆಯಲಾಗಿದೆ ಎಂದು ಗುರುತಿಸಲು ಸಾಧ್ಯವಾಗದಿದ್ದಾಗ, ನಿಧಿಯನ್ನು ಅಂಥ ಜೈವಿಕ ಸಂಪನ್ಮೂಲಗಳು ದೊರೆಯುವಂಥ ಪ್ರದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ;

(ಇ) ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ನೀಡುವ ಅನುದಾನಗಳಿಗೆ ಅಥವಾ ಸಾಲಗಳಿಗೆ;

(ಎಫ್) ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವ ಚಟುವಟಿಕೆಗಳಿಗಾಗಿ

– ಬಳಸತಕ್ಕದ್ದು.

**33. ರಾಜ್ಯ ಜೀವ ವೈವಿಧ್ಯ ಮಂಡಳಿಯ ವಾರ್ಷಿಕ ವರದಿ.–** ರಾಜ್ಯ ಜೀವ ವೈವಿಧ್ಯ ಮಂಡಳಿಯು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ಲೆಕ್ಕದ ವಿವರಗಳನ್ನು ನೀಡುವ ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಅದರ ಪ್ರತಿಯನ್ನು ಸಲ್ಲಿಸತಕ್ಕದ್ದು.

**34. ರಾಜ್ಯ ಜೀವ ವೈವಿಧ್ಯ ಮಂಡಳಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.–** ರಾಜ್ಯ ಜೀವ ವೈವಿಧ್ಯ ಮಂಡಳಿಯ ಲೆಕ್ಕಪತ್ರಗಳನ್ನು, ರಾಜ್ಯದ ಮಹಾಲೇಖಾಪಾಲರೊಂದಿಗೆ ಸಮಾಲೋಚಿಸಿ ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ರಾಜ್ಯ ಜೀವ ವೈವಿಧ್ಯ ಮಂಡಳಿಯು, ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಪ್ರತಿಯನ್ನು ಅದರ ಮೇಲೆ ಲೆಕ್ಕಪರಿಶೋಧಕರ ವರದಿಯೊಂದಿಗೆ ನಿಯಮಿಸಬಹುದಾದಂಥ ದಿನಾಂಕಕ್ಕೂ ಮುಂಚೆ ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

**35. ರಾಜ್ಯ ಜೀವ ವೈವಿಧ್ಯ ಮಂಡಳಿಯ ವಾರ್ಷಿಕ ವರದಿಯನ್ನು ರಾಜ್ಯ ವಿಧಾನಮಂಡಲದ ಮುಂದೆ ಇಡುವುದು.–** ರಾಜ್ಯ ಸರ್ಕಾರವು, ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ, ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ IX

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯಗಳು

**36. ಕೇಂದ್ರ ಸರ್ಕಾರವು, ಜೈವಿಕ ವೈವಿಧ್ಯತೆ ಸಂರಕ್ಷಣೆ, ಸಂವರ್ಧನೆ ಮತ್ತು ಸುಸ್ಥಿರ ಬಳಕೆಗಾಗಿ ರಾಷ್ಟ್ರೀಯ ಕಾರ್ಯತಂತ್ರಗಳು ಮತ್ತು ಯೋಜನೆಗಳನ್ನು ರೂಪಿಸುವುದು.–** (1) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಮಾಲೋಚಿಸಿ, ಜೈವಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಪ್ರದೇಶಗಳ ಗುರುತಿಸುವಿಕೆ ಮತ್ತು ಮೇಲ್ವಿಚಾರಣೆಗಾಗಿ, ಇರುನೆಲೆ (*in situ*) ಮತ್ತು ಹೊರನೆಲೆ (*ex situ*) ಸಂವರ್ಧನೆಗೆ, ಕೃಷಿ ಪ್ರಭೇದಗಳು, ನಾಟಿ ಪ್ರಭೇದಗಳು ಮತ್ತು ದೇಶಿಯ ತಳಿಗಳನ್ನು ಒಳಗೊಂಡಂತೆ ಜೈವಿಕ ಸಂಪನ್ಮೂಲಗಳ ಸಂರಕ್ಷಣೆಗೆ, ಜೀವ ವೈವಿಧ್ಯಕ್ಕೆ ಸಂಬಂಧಿಸಿದಂತೆ ಅರಿವನ್ನು ಹೆಚ್ಚಿಸಲು ಸಂಶೋಧನೆ, ತರಬೇತಿ ಮತ್ತು ಸಾರ್ವಜನಿಕ ಶಿಕ್ಷಣಕ್ಕಾಗಿ ಪ್ರೋತ್ಸಾಹಕ ಕ್ರಮಗಳೂ ಸೇರಿದಂತೆ ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ ಮತ್ತು ಸಂವರ್ಧನೆಗಾಗಿ ಮತ್ತು ಸುಸ್ಥಿರ ಬಳಕೆಗಾಗಿ ರಾಷ್ಟ್ರೀಯ ಕಾರ್ಯತಂತ್ರಗಳನ್ನು, ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಜೈವಿಕ ವೈವಿಧ್ಯತೆಗಳಿಂದ, ಜೈವಿಕ ಸಂಪನ್ಮೂಲಗಳಿಂದ ಮತ್ತು ಅವುಗಳ ಆವಾಸಗಳಿಂದ ಸಮೃದ್ಧವಾಗಿರುವ ಯಾವುದೇ ಪ್ರದೇಶವು, ಅತಿಯಾದ ಬಳಕೆ, ದುರ್ಬಳಕೆ ಅಥವಾ ನಿರ್ಲಕ್ಷ್ಯದಿಂದಾಗಿ ಅಪಾಯಕ್ಕೀಡಾಗುವ ಸಂಭವವಿದೆ ಎಂದು ಮನಗಂಡಲ್ಲಿ, ಅದು, ಅಂಥ ರಾಜ್ಯ ಸರ್ಕಾರಕ್ಕೆ ಒದಗಿಸಲು ಸಾಧ್ಯವಿರುವಂಥ ಅಥವಾ ಅಗತ್ಯವಿರುವಂಥ ಯಾವುದೇ ತಾಂತ್ರಿಕ ಮತ್ತು ಇತರೆ ನೆರವನ್ನು ನೀಡಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೆ ಕೂಡಲೇ ನಿರ್ದೇಶನಗಳನ್ನು ನೀಡತಕ್ಕದ್ದು.

(3) ಕೇಂದ್ರ ಸರ್ಕಾರವು, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ತಾನು ಸೂಕ್ತವೆಂದು ಭಾವಿಸಿದಲ್ಲೆಲ್ಲಾ, ಜೈವಿಕ ವೈವಿಧ್ಯತೆಯ ಸಂರಕ್ಷಣೆಯನ್ನು, ಸಂವರ್ಧನೆಯನ್ನು ಮತ್ತು ಸುಸ್ಥಿರ ಬಳಕೆಯನ್ನು ಸಂಬಂಧಪಟ್ಟ ವಲಯದ ಕಾರ್ಯನೀತಿಗಳಲ್ಲಿ ಅಥವಾ ಅಂತರ–ವಲಯ ಯೋಜನೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಸಂಯೋಜಿಸತಕ್ಕದ್ದು.

(4) ಕೇಂದ್ರ ಸರ್ಕಾರವು,–

(i) ಅಗತ್ಯವಿರುವಲ್ಲೆಲ್ಲಾ, ಜೈವಿಕ ವೈವಿಧ್ಯತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುವ ಸಂಭವವಿರುವ ಪ್ರಾಜೆಕ್ಟಿನ ಪರಿಸರಾತ್ಮಕ ಪ್ರಭಾವದ ನಿರ್ಧರಣೆಗಾಗಿ, ಅಂಥ ಪರಿಣಾಮಗಳನ್ನು ತಪ್ಪಿಸುವ ಅಥವಾ ಕಡಿಮೆ ಮಾಡುವ ದೃಷ್ಟಿಯಿಂದ ಮತ್ತು ಸೂಕ್ತವಾಗಿರುವಲ್ಲಿ ಅಂಥ ನಿರ್ಧರಣೆಯಲ್ಲಿ ಸಾರ್ವಜನಿಕ ಸಹಭಾಗಿತ್ವಕ್ಕಾಗಿ ಅವಕಾಶ ಕಲ್ಪಿಸಲು;

(ii) ಜೈವಿಕ ತಂತ್ರಜ್ಞಾನದಿಂದ ಮಾರ್ಪಡಿಸಿದ ಸಜೀವಿಗಳ ಬಳಕೆಯಿಂದ ಮತ್ತು ಬಿಡುಗಡೆಯಿಂದ ಜೈವಿಕ ವೈವಿಧ್ಯತೆಯ ಸಂರಕ್ಷಣೆಗೆ ಮತ್ತು ಸುಸ್ಥಿರ ಬಳಕೆಗೆ ಮತ್ತು ಮಾನವನ ಆರೋಗ್ಯಕ್ಕೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಂಭವವಿರುವ ಅಪಾಯಗಳನ್ನು ತಡೆಯಲು, ನಿರ್ವಹಿಸಲು ಅಥವಾ ನಿಯಂತ್ರಿಸಲು

– ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(5) ಕೇಂದ್ರ ಸರ್ಕಾರವು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಶಿಫಾರಸು ಮಾಡಿದಂತೆ ಸ್ಥಳೀಯ, ರಾಜ್ಯ ಅಥವಾ ರಾಷ್ಟ್ರಮಟ್ಟಗಳಲ್ಲಿ ಅಂಥ ಜ್ಞಾನವನ್ನು ನೋಂದಾಯಿಸುವುದನ್ನೂ ಒಳಗೊಳ್ಳಬಹುದಾದಂಥ ಕ್ರಮಗಳ ಮೂಲಕ ಮತ್ತು ಬೇರೊಂದಕ್ಕೆ

ಹೋಲಿಸಲಾಗದ ತನ್ನದೇ ಆದ ಸ್ವರೂಪದ ವ್ಯವಸ್ಥೆಯನ್ನು ಒಳಗೊಂಡಂತೆ ಸಂರಕ್ಷಣೆಗೆ ಸಂಬಂಧಿಸಿದ ಇತರೆ ಕ್ರಮಗಳ ಮೂಲಕ ಜೈವಿಕ ವೈವಿಧ್ಯತೆಗೆ ಸಂಬಂಧಿಸಿದ ಸ್ಥಳೀಯ ಜನರಲ್ಲಿನ ಜ್ಞಾನವನ್ನು ಗೌರವಿಸಲು ಮತ್ತು ಸಂರಕ್ಷಿಸಲು ಪ್ರಯತ್ನಿಸತಕ್ಕದ್ದು.

(6) ಕೇಂದ್ರ ಸರ್ಕಾರವು, ಜೈವಿಕ ವೈವಿಧ್ಯತೆ ಅಥವಾ ಅದಕ್ಕೆ ಸಂಬಂಧಪಟ್ಟ ಸಾಂಪ್ರದಾಯಿಕ ಜ್ಞಾನದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗಾಗಿ ಕ್ರಮಗಳನ್ನು ಕೈಗೊಳ್ಳಲು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಗಳನ್ನು ತೊಡಗಿಸಿಕೊಳ್ಳತಕ್ಕದ್ದು.

*ವಿವರಣೆ.–* ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಹೊರನೆಲೆ ಸಂರಕ್ಷಣೆ" ಎಂದರೆ, ಜೈವಿಕ ವೈವಿಧ್ಯತೆಯ ಪೂರಕ ಅಂಶಗಳನ್ನು ಅವುಗಳ ಸ್ವಾಭಾವಿಕ ವಾಸಸ್ಥಳಗಳಿಂದ ಹೊರಗೆ ಸಂರಕ್ಷಿಸುವುದು ಎಂದು ಅರ್ಥ;

(ಬಿ) "ಇರುನೆಲೆ ಸಂರಕ್ಷಣೆ" ಎಂದರೆ, ಪರಿಸರ ವ್ಯವಸ್ಥೆಯ ಮತ್ತು ಸ್ವಾಭಾವಿಕ ವಾಸಸ್ಥಳಗಳ ಸಂರಕ್ಷಣೆ ಮತ್ತು ಸ್ವಾಭಾವಿಕ ಪರಿಸರಗಳಲ್ಲಿ ಜೀವಿಸಬಲ್ಲ ಅವುಗಳ ಪ್ರಭೇದಗಳ ಸಂಖ್ಯೆಯನ್ನು ಕಾಪಾಡಿಕೊಂಡು ಬರುವುದು ಮತ್ತು ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಸಾಕಿದ ಅಥವಾ ಬೆಳೆಸಿದ ಪ್ರಭೇದಗಳಿಗೆ ಸಂಬಂಧಿಸಿದಂತೆ, ಎಲ್ಲಿ ಅವುಗಳು ವಿಶಿಷ್ಟ ಗುಣಲಕ್ಷಣಗಳನ್ನು ಬೆಳೆಸಿಕೊಂಡಿವೆಯೋ ಆ ಪರಿಸರಗಳಲ್ಲಿ ಅವುಗಳ ಸಂರಕ್ಷಣೆ ಎಂದರ್ಥ.

**36ಎ. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಕೈಗೊಳ್ಳಬೇಕಾದ ಕ್ರಮಗಳು.–** ಭಾರತವು ಸಹಿ ಹಾಕಿರುವ ಅಂತರರಾಷ್ಟ್ರೀಯ ಬಾಧ್ಯತೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ವಿದೇಶದಿಂದ ಪಡೆದುಕೊಂಡ ಅಂತರರಾಷ್ಟ್ರೀಯ ಸಂಪನ್ಮೂಲಗಳ ಪಡೆದುಕೊಳ್ಳುವಿಕೆ ಮತ್ತು ಬಳಕೆಯನ್ನು ಭಾರತದ ರಾಜ್ಯಕ್ಷೇತ್ರದೊಳಗೆ ಮೇಲ್ವಿಚಾರಣೆ ಮಾಡಲು ಮತ್ತು ನಿಯಂತ್ರಿಸಲು ಯಾವುದೇ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಅಥವಾ ಯಾವುದೇ ಇತರ ಸಂಸ್ಥೆಗೆ ಅಧಿಕಾರ ನೀಡಬಹುದು.

**36ಬಿ. ರಾಜ್ಯ ಸರ್ಕಾರವು ಜೈವಿಕ ವೈವಿಧ್ಯತೆ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗಾಗಿ ಕಾರ್ಯತಂತ್ರಗಳು ಮತ್ತು ಯೋಜನೆಗಳನ್ನು ರೂಪಿಸುವುದು.–** (1) ರಾಜ್ಯ ಸರ್ಕಾರವು, ರಾಷ್ಟ್ರೀಯ ಕಾರ್ಯತಂತ್ರಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಅನುಗುಣವಾಗಿ, ಜೈವಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಪ್ರದೇಶಗಳ ಗುರುತಿಸುವಿಕೆ ಮತ್ತು ಮೇಲ್ವಿಚಾರಣೆಗಾಗಿ, ಇರುನೆಲೆ ಮತ್ತು ಹೊರನೆಲೆ ಸಂವರ್ಧನೆಗೆ, ಕೃಷಿ ಪ್ರಭೇದಗಳು, ನಾಟಿ ಪ್ರಭೇದಗಳು ಮತ್ತು ದೇಶೀಯ ತಳಿಗಳನ್ನು ಒಳಗೊಂಡಂತೆ ಜೈವಿಕ ಸಂಪನ್ಮೂಲಗಳ ಸಂರಕ್ಷಣೆಗೆ, ಜೀವ ವೈವಿಧ್ಯಕ್ಕೆ ಸಂಬಂಧಿಸಿದಂತೆ ಅರಿವನ್ನು ಹೆಚ್ಚಿಸಲು ಸಂಶೋಧನೆ, ತರಬೇತಿ ಮತ್ತು ಸಾರ್ವಜನಿಕ ಶಿಕ್ಷಣಕ್ಕಾಗಿ ಪ್ರೋತ್ಸಾಹಕ ಕ್ರಮಗಳೂ ಸೇರಿದಂತೆ ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ ಮತ್ತು ಸಂವರ್ಧನೆಗಾಗಿ ಮತ್ತು ಸುಸ್ಥಿರ ಬಳಕೆಗಾಗಿ ಕಾರ್ಯತಂತ್ರಗಳನ್ನು, ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಸೂಕ್ತವೆಂದು ಭಾವಿಸಿದಲ್ಲೆಲ್ಲಾ ಜೈವಿಕ ವೈವಿಧ್ಯತೆಯ ಸಂರಕ್ಷಣೆಯನ್ನು, ಸಂವರ್ಧನೆಯನ್ನು ಮತ್ತು ಸುಸ್ಥಿರ ಬಳಕೆಯನ್ನು ಸಂಬಂಧಿತ ವಲಯದ ಕಾರ್ಯನೀತಿಗಳಲ್ಲಿ ಅಥವಾ ಅಂತರ–ವಲಯ ಯೋಜನೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಸಂಯೋಜಿಸತಕ್ಕದ್ದು.

**37. ಜೀವ ವೈವಿಧ್ಯದ ಪಾರಂಪರಿಕ ತಾಣಗಳು.–** (1) ರಾಜ್ಯ ಸರ್ಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಬಾಧಕವಾಗದಂತೆ ರಾಜ್ಯ ಜೀವ ವೈವಿಧ್ಯ ಮಂಡಳಿಯ ಶಿಫಾರಸ್ಸುಗಳನ್ನು ಆಧಾರಿಸಿ, ಕಾಲಕಾಲಕ್ಕೆ ಈ ಅಧಿನಿಯಮದ ಮೇರೆಗೆ ಜೀವ ವೈವಿಧ್ಯದ ಪ್ರಾಮುಖ್ಯತೆ ಹೊಂದಿರುವ ಪ್ರದೇಶಗಳನ್ನು ಜೀವ ವೈವಿಧ್ಯ ಪಾರಂಪರಿಕ ತಾಣಗಳೆಂದು ಅಧಿಕೃತ ರಾಜಪತ್ರದಲ್ಲಿ ಅಧಿಸೂಚಿಸಬಹುದು:

ಪರಂತು, ರಾಜ್ಯ ಜೀವ ವೈವಿಧ್ಯ ಮಂಡಳಿಯು ಅಂಥ ಶಿಫಾರಸ್ಸುಗಳನ್ನು ಮಾಡುವುದಕ್ಕೂ ಮುಂಚೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ಮತ್ತು ಜೀವ ವೈವಿಧ್ಯ ನಿರ್ವಹಣಾ ಸಮಿತಿಯೊಂದಿಗೆ ಸಮಾಲೋಚಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಎಲ್ಲಾ ಜೀವ ವೈವಿಧ್ಯ ಪಾರಂಪರಿಕ ತಾಣಗಳ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ನಿಯಮಗಳನ್ನು ರೂಪಿಸಬಹುದು.

(3) ರಾಜ್ಯ ಸರ್ಕಾರವು, ಅಂಥ ಅಧಿಸೂಚನೆಯಿಂದ ಆರ್ಥಿಕವಾಗಿ ಬಾಧಿತನಾದ ಯಾರೇ ವ್ಯಕ್ತಿಗೆ ಅಥವಾ ಜನರ ವರ್ಗಕ್ಕೆ ಪರಿಹಾರ ನೀಡುವ ಅಥವಾ ಪುನರ್ವಸತಿ ಕಲ್ಪಿಸುವುದಕ್ಕಾಗಿ ಯೋಜನೆಗಳನ್ನು ರೂಪಿಸತಕ್ಕದ್ದು.

**38. ಅಪಾಯದ ಅಂಚಿನಲ್ಲಿರುವ ಪ್ರಭೇದಗಳನ್ನು ಅಧಿಸೂಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು, ಸಂಬಂಧಪಟ್ಟ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ವಿನಾಶದ ಅಂಚಿನಲ್ಲಿರುವ ಅಥವಾ ಸದ್ಯದಲ್ಲಿಯೇ ನಾಶವಾಗುವ ಸಂಭವವಿರುವ ಯಾವುವೇ ಪ್ರಭೇದಗಳನ್ನು ಅಪಾಯದ ಅಂಚಿನಲ್ಲಿರುವ ಪ್ರಭೇದಗಳೆಂದು ಕಾಲಕಾಲಕ್ಕೆ ಅಧಿಸೂಚಿಸಬಹುದು ಮತ್ತು ಯಾವುದೇ ಉದ್ದೇಶಕ್ಕಾಗಿ ಅವುಗಳ ಸಂಗ್ರಹಣೆಯನ್ನು ನಿಷೇಧಿಸಬಹುದು ಅಥವಾ ನಿಯಂತ್ರಿಸಬಹುದು ಹಾಗೂ ಆ ಪ್ರಭೇದಗಳ ಪುನರ್ವಸತಿ ಮತ್ತು ಸಂರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು:

ಪರಂತು, ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಕ್ಕೆ ಅಂಥ ಅಧಿಕಾರವನ್ನು ಪ್ರತ್ಯಾಯೋಜಿಸಬಹುದು:

ಮತ್ತು ಪರಂತು, ಅಂಥ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಪ್ರತ್ಯಾಯೋಜಿಸಿರುವಲ್ಲಿ, ಅದು ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೂ ಮುಂಚೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದೊಂದಿಗೆ ಸಮಾಲೋಚಿಸತಕ್ಕದ್ದು.

**39. ನಿಕ್ಷೇಪಗಾರಗಳನ್ನು ಗೊತ್ತುಪಡಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಜೈವಿಕ ಸಂಪನ್ಮೂಲಗಳ ವಿವಿಧ ವರ್ಗಗಳಿಗಾಗಿ ಈ ಅಧಿನಿಯಮದ ಮೇರೆಗೆ ಸಂಸ್ಥೆಗಳನ್ನು ನಿಕ್ಷೇಪಗಾರಗಳೆಂದು ಗೊತ್ತುಪಡಿಸಬಹುದು.

(2) ನಿಕ್ಷೇಪಗಾರಗಳಲ್ಲಿ ಇಡಲಾದ ವೋಚರ್ ಮಾದರಿಗಳೂ ಸೇರಿದಂತೆ, ಜೈವಿಕ ಸಾಮಗ್ರಿಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡತಕ್ಕದ್ದು.

(3) ಯಾರೇ ವ್ಯಕ್ತಿಯು ಆವಿಷ್ಕರಿಸಿದ ಯಾವುದೇ ಹೊಸ ಜೈವಿಕ ಪ್ರಭೇದವನ್ನು ಈ ಉದ್ದೇಶಕ್ಕಾಗಿ ಗೊತ್ತುಪಡಿಸಲಾದ ನಿಕ್ಷೇಪಗಾರಗಳಿಗೆ ಅಥವಾ ಯಾವುದೇ ಸಂಸ್ಥೆಗೆ ಅಧಿಸೂಚಿಸತಕ್ಕದ್ದು ಮತ್ತು ಅವನು ವೋಚರ್ ಮಾದರಿಗಳನ್ನು ಅಂಥ ನಿಕ್ಷೇಪಗಾರದಲ್ಲಿ ಅಥವಾ ಸಂಸ್ಥೆಯಲ್ಲಿ ಇಡತಕ್ಕದ್ದು.

**40. ಕೆಲವು ಸಂದರ್ಭಗಳಲ್ಲಿ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗದಿರುವುದು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧಗಳು ಮತ್ತು ಸಾಮಾನ್ಯವಾಗಿ ವಾಣಿಜ್ಯ ಸರಕುಗಳಾಗಿರುವ ಜೈವಿಕ ಸಂಪನ್ಮೂಲಗಳಿಗೆ ಅಥವಾ ಅವುಗಳಿಂದ ಪಡೆದ ವಸ್ತುಗಳಿಗೆ, ಕೃಷಿ ತ್ಯಾಜ್ಯಗಳೂ ಸೇರಿದಂತೆ 7ನೇ ಪ್ರಕರಣದಲ್ಲಿ ಬರುವ, ರಚಿಸಲಾದ ವಿನಿಯಮಗಳ ಪ್ರಕಾರ ನೋಂದಾಯಿತವಾದ ಅಥವಾ ನಿಯಮಿಸಬಹುದಾದಂಥ ಸಂಸ್ಥೆಗಳಿಗಾಗಿ ಅಧಿಸೂಚಿಸಿದ ಮತ್ತು ಕೃಷಿ ಮಾಡಿದ ಔಷಧೀಯ ಸಸ್ಯಗಳು ಮತ್ತು ಅವುಗಳ ಉತ್ಪನ್ನಗಳಿಗೆ ಅನ್ವಯವಾಗತಕ್ಕದ್ದಲ್ಲವೆಂದು ಘೋಷಿಸಬಹುದು:

ಪರಂತು, 6ನೇ ಪ್ರಕರಣದ (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಲಾದ ಕಾರ್ಯಚಟುವಟಿಕೆಗಳಿಗೆ ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ.

## ಅಧ್ಯಾಯ X

## ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳು

**41. ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ.–** (1) ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯತಿ ಹಂತದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಪುರಸಭೆಯ ಹಂತದಲ್ಲಿ ನಗರ ಪಂಚಾಯತ್ ಅಥವಾ ಪೌರಸಭಾ ಸಮಿತಿಯಲ್ಲಿನ ಪ್ರತಿಯೊಂದು ಸ್ಥಳೀಯ ಸಂಸ್ಥೆಯು, ತನ್ನ ಪ್ರದೇಶದಲ್ಲಿ, ಆವಾಸಗಳನ್ನು ಸಂರಕ್ಷಿಸುವುದು, ದೇಶೀಯ ತಳಿಗಳು, ನಾಟಿ ಪ್ರಭೇದಗಳು, ರೈತ ವಿಕಸಿತ ಪ್ರಭೇದಗಳು ಮತ್ತು ಕೃಷಿ ಪ್ರಭೇದಗಳು, ಸಾಕುಪ್ರಾಣಿಗಳು ಮತ್ತು ಅವುಗಳ ತಳಿಗಳ ಸಂರಕ್ಷಣೆ, ಜಲ ಮೂಲಗಳಲ್ಲಿ ವಾಸಿಸುತ್ತಿರುವ ಜಲಚರಗಳು ಹಾಗೂ ಸೂಕ್ಷ್ಮಾಣು ಜೀವಿಗಳ ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯತೆಗೆ ಸಂಬಂಧಿಸಿದ ಜ್ಞಾನವನ್ನು ಕಾಲಾನುಕ್ರಮಾನುಸಾರ ಬರೆದಿಡುವುದೂ ಸೇರಿದಂತೆ ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ದಾಖಲಾತಿಯ ಉದ್ದೇಶಕ್ಕಾಗಿ ಜೀವ ವೈವಿಧ್ಯ ನಿರ್ವಹಣಾ ಸಮಿತಿ (ಯಾವುದೇ ಹೆಸರಿನಿಂದ ಕರೆಯಲಾದ)ಯನ್ನು ರಚಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಮಧ್ಯಂತರ ಅಥವಾ ಜಿಲ್ಲಾ ಪಂಚಾಯತ್ ಹಂತದಲ್ಲಿ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಬಹುದು.

(1ಎ) ಆವಾಸಗಳು, ದೇಶೀಯ ತಳಿಗಳು, ನಾಟಿ ಪ್ರಭೇದಗಳು, ಕೃಷಿ ಪ್ರಭೇದಗಳು, ಸಾಕುಪ್ರಾಣಿಗಳ ತಳಿಗಳು ಮತ್ತು ಸೂಕ್ಷ್ಮಾಣು ಜೀವಿಗಳನ್ನು ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯತೆಗೆ ಸಂಬಂಧಿಸಿದ ಸಾಂಪ್ರಾದಾಯಿಕ ಜ್ಞಾನದ ಕಾಲಾನುಕ್ರಮಣಿಕೆ ನೀಡುವುದೂ ಸೇರಿದಂತೆ ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ದಸ್ತಾವೇಜೀಕರಣಗೊಳಿಸುವುದು ಹಾಗೆ ರಚಿಸಲಾದ ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಪ್ರಕಾರ್ಯಗಳಾಗಿರತಕ್ಕದ್ದು.

(1ಬಿ) ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಸಂರಚನೆಯು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಸದರಿ ಸಮಿತಿಯ ಸದಸ್ಯರ ಸಂಖ್ಯೆಯು ಏಳಕ್ಕಿಂತ ಕಡಿಮೆಯಿಲ್ಲದಂತೆ ಮತ್ತು ಹನ್ನೊಂದನ್ನು ಮೀರತಕ್ಕದ್ದಲ್ಲ.

(2) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ಮತ್ತು ರಾಜ್ಯ ಜೀವ ವೈವಿಧ್ಯ ಮಂಡಳಿಗಳು, ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಅಧಿಕಾರವ್ಯಾಪ್ತಿಯೊಳಗೆ ದೊರೆಯುವಂಥ ಜೈವಿಕ ಸಂಪನ್ಮೂಲಗಳ ಹಾಗೂ ಅದಕ್ಕೆ ಸಂಬಂಧಪಟ್ಟ ಯಾವುದೇ ಸಾಂಪ್ರಾದಾಯಿಕ ಜ್ಞಾನದ ಬಳಕೆಗೆ ಸಂಬಂಧಪಟ್ಟಂತೆ ಯಾವುದೇ ನಿರ್ಣಯವನ್ನು ಕೈಗೊಳ್ಳುವಾಗ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳೊಂದಿಗೆ ಸಮಾಲೋಚಿಸತಕ್ಕದ್ದು.

*ವಿವರಣೆ.–* ಈ ಉಪಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕೃಷಿ ಪ್ರಭೇದ" ಎಂದರೆ, ಸಾಗುವಳಿಯ ಮೂಲಕ ಬೆಳೆದ ಮತ್ತು ಉಳಿದುಕೊಂಡು ಬಂದ ಅಥವಾ ಸಾಗುವಳಿಯ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ಅಭಿವೃದ್ಧಿಪಡಿಸಿದ ಸಸ್ಯ ಪ್ರಭೇದ;

(ಬಿ) "ನಾಟಿ ಪ್ರಭೇದ" ಎಂದರೆ, ರೈತರು ಅಭಿವೃದ್ಧಿಪಡಿಸಿದ, ಬೆಳೆಸಿದ ಮತ್ತು ಅವರು ಪರಸ್ಪರ ಅನೌಪಚಾರಿಕವಾಗಿ ವಿನಿಮಯ ಮಾಡಿಕೊಂಡ, ಸಾಗುವಳಿ ಮಾಡಿದ ಸಸ್ಯ ಪ್ರಭೇದ;

(ಸಿ) "ದೇಶೀಯ ತಳಿ" ಎಂದರೆ, ಪ್ರಾಚೀನ ಕಾಲದ ರೈತರು ಹಾಗೂ ಅವರ ಪೀಳಿಗೆಯವರು ಬೆಳೆಯುತ್ತಿದ್ದ ಪುರಾತನ ಕಾಲದ ಕೃಷಿ ಪ್ರಭೇದ;

(ಡಿ) "ರೈತ ವಿಕಸಿತ ಪ್ರಭೇದ" ಎಂದರೆ:–

(i) ರೈತರು ತಮ್ಮ ಜಮೀನುಗಳಲ್ಲಿ ಸಾಂಪ್ರದಾಯಿಕವಾಗಿ ಸಾಗುವಳಿ ಮಾಡಿದ ಮತ್ತು ಉತ್ಪತ್ತಿ ಮಾಡಿದ ಪ್ರಭೇದ; ಅಥವಾ

(ii) ರೈತರು ಸಾಮಾನ್ಯ ಜ್ಞಾನವನ್ನು ಹೊಂದಿರುವ ವಿವಿಧ ಪ್ರಭೇದಗಳ ವನ್ಯ ಸಂಬಂಧಿ ಅಥವಾ ದೇಶೀಯ ತಳಿ.

(3) ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳು, ತಮ್ಮ ಅಧಿಕಾರವ್ಯಾಪ್ತಿಯೊಳಗೆ ಇರುವ ಪ್ರದೇಶಗಳಿಂದ, ವಾಣಿಜ್ಯ ಉದ್ದೇಶಗಳಿಗಾಗಿ, ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯುವುದಕ್ಕಾಗಿ ಅಥವಾ ಸಂಗ್ರಹಿಸುವುದಕ್ಕಾಗಿ ಯಾರೇ ವ್ಯಕ್ತಿಗೆ ಸಂಗ್ರಹಣಾ ಫೀಜಿನ ರೂಪದಲ್ಲಿ ಶುಲ್ಕಗಳನ್ನು ವಿಧಿಸಬಹುದು.

## ಅಧ್ಯಾಯ XI

## ಸ್ಥಳೀಯ ಜೀವ ವೈವಿಧ್ಯ ನಿಧಿ

**42. ಸ್ಥಳೀಯ ಜೀವ ವೈವಿಧ್ಯ ನಿಧಿಗೆ ಅನುದಾನಗಳು.–** ರಾಜ್ಯ ಸರ್ಕಾರವು, ಈ ಕುರಿತು ಇರುವ ಕಾನೂನಿನ ಮೂಲಕ ರಾಜ್ಯ ವಿಧಾನಮಂಡಲವು ಮಾಡಿದ ಯುಕ್ತ ಧನವಿನಿಯೋಗದ ತರುವಾಯ, ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸಿಕೊಳ್ಳಲು, ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತವನ್ನು ಅನುದಾನಗಳು ಅಥವಾ ಸಾಲಗಳ ರೂಪದಲ್ಲಿ ಸ್ಥಳೀಯ ಜೀವ ವೈವಿಧ್ಯ ನಿಧಿಗೆ ಸಂದಾಯ ಮಾಡಬಹುದು.

**43. ಸ್ಥಳೀಯ ಜೀವ ವೈವಿಧ್ಯ ನಿಧಿಯ ರಚನೆ.–** (1) ರಾಜ್ಯ ಸರ್ಕಾರವು, ಯಾವುದೇ ಸ್ವಯಂ ಆಡಳಿತ ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ, ಅಧಿಸೂಚಿಸಲಾದ ಪ್ರತಿಯೊಂದು ಪ್ರದೇಶದಲ್ಲಿ, ಸ್ಥಳೀಯ ಜೀವ ವೈವಿಧ್ಯ ನಿಧಿಯೆಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ,–

(ಎ) 42ನೇ ಪ್ರಕರಣದ ಮೇರೆಗೆ ನೀಡಲಾದ ಯಾವುವೇ ಅನುದಾನಗಳನ್ನು ಮತ್ತು ಸಾಲಗಳನ್ನು;

(ಬಿ) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ನೀಡಿದ ಯಾವುವೇ ಅನುದಾನಗಳನ್ನು ಅಥವಾ ಸಾಲಗಳನ್ನು;

(ಸಿ) ರಾಜ್ಯ ಜೀವ ವೈವಿಧ್ಯ ಮಂಡಳಿಗಳು ನೀಡಿದ ಯಾವುವೇ ಅನುದಾನಗಳನ್ನು ಮತ್ತು ಸಾಲಗಳನ್ನು;

(ಡಿ) ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳು ಸ್ವೀಕರಿಸುವ 41ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಶುಲ್ಕಗಳನ್ನು;

(ಇ) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಮೂಲಗಳಿಂದ ಸ್ಥಳೀಯ ಜೀವ ವೈವಿಧ್ಯ ನಿಧಿಯು ಸ್ವೀಕರಿಸಿದ ಪ್ರಯೋಜನಗಳ ಹಂಚಿಕೆಯ ಮೊಬಲಗೂ ಒಳಗೊಂಡಂತೆ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

**44. ಸ್ಥಳೀಯ ಜೀವ ವೈವಿಧ್ಯ ನಿಧಿಯ ಬಳಕೆ.–** (1) ಸ್ಥಳೀಯ ಜೀವ ವೈವಿಧ್ಯ ನಿಧಿಯನ್ನು, ಈ ಬಗ್ಗೆ ಮಾಡಿದ ವಿನಿಯಮಗಳು ಮತ್ತು ಮಾರ್ಗಸೂಚಿಗಳಿಗೆ ಅನುಸಾರವಾಗಿ,–

(ಎ) ಸಂಬಂಧಪಟ್ಟ ಸ್ಥಳೀಯ ನಿಕಾಯದ ಅಧಿಕಾರವ್ಯಾಪ್ತಿಯೊಳಗೆ ಬರುವ ಪ್ರದೇಶಗಳ ಪುನರ್–ಸ್ವಾಧೀನತೆಯೂ ಸೇರಿದಂತೆ ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸಂವರ್ಧನೆಗೆ;

(ಬಿ) ಸಂರಕ್ಷಣೆಯ ವಿಷಯಗಳ ಬಗ್ಗೆ ಯಾವುದೇ ರಾಜಿಯಾಗದಂತೆ ಸಮುದಾಯದ ಸಮಾಜೋ–ಆರ್ಥಿಕ ಅಭಿವೃದ್ಧಿಗೆ; ಮತ್ತು

(ಸಿ) ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಆಡಳಿತಾತ್ಮಕ ವೆಚ್ಚಗಳಿಗೆ

– ಬಳಸತಕ್ಕದ್ದು.

(2) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ನಿಧಿಯನ್ನು ಬಳಸತಕ್ಕದ್ದು.

**45. ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳ ವಾರ್ಷಿಕ ವಿವರಣಾಪಟ್ಟಿ.–** ಸ್ಥಳೀಯ ಜೀವ ವೈವಿಧ್ಯ ನಿಧಿಯ ಅಭಿರಕ್ಷಕನು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ಲೆಕ್ಕಪತ್ರವನ್ನು ನೀಡುವ ತನ್ನ ವಾರ್ಷಿಕ ವಿವರಣಾಪಟ್ಟಿಯನ್ನು ಪ್ರತಿ ಹಣಕಾಸು ವರ್ಷದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಮತ್ತು ಸಂಬಂಧಪಟ್ಟ ಸ್ಥಳೀಯ ನಿಕಾಯಕ್ಕೆ ಸಲ್ಲಿಸತಕ್ಕದ್ದು.

**46. ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.–** (1) ಜೀವ ವೈವಿಧ್ಯ ನಿರ್ವಹಣಾ ಸಮಿತಿಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು ಮತ್ತು ಆ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(2) ಜೀವ ವೈವಿಧ್ಯ ನಿರ್ವಹಣಾ ಸಮಿತಿಯು, ಲೆಕ್ಕಪರಿಶೋಧಕನ ವರದಿಯೊಂದಿಗೆ, ಲೆಕ್ಕಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಸಂಬಂಧಪಟ್ಟ ಸ್ಥಳೀಯ ನಿಕಾಯಕ್ಕೆ ಮತ್ತು ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಒದಗಿಸತಕ್ಕದ್ದು.

**47. ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ವಾರ್ಷಿಕ ವರದಿ, ಮುಂತಾದವುಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಸಲ್ಲಿಸುವುದು.–** 41ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಜೀವ ವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸುವ ಪ್ರತಿಯೊಂದು ಸ್ಥಳೀಯ ನಿಕಾಯವು, ಅನುಕ್ರಮವಾಗಿ 45ನೇ ಮತ್ತು 46ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಮತ್ತು ಅಂಥ ಸಮಿತಿಗೆ ಸಂಬಂಧಿಸಿದ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಕನ ವರದಿಯೊಂದಿಗೆ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು ಸ್ಥಳೀಯ ನಿಕಾಯದ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಸಲ್ಲಿಸುವಂತೆ ಮಾಡತಕ್ಕದ್ದು.

## ಅಧ್ಯಾಯ XII

### ಸಂಕೀರ್ಣ

**48. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಕೇಂದ್ರ ಸರ್ಕಾರವು ನೀಡುವ ನಿರ್ದೇಶನಗಳಿಗೆ ಬದ್ಧವಾಗಿರುವುದು.–** (1) ಈ ಅಧಿನಿಯಮದ ಈ ಹಿಂದಿನ ಉಪಬಂಧಗಳಿಗೆ ಬಾಧಕವಾಗದಂತೆ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ, ಕೇಂದ್ರ ಸರ್ಕಾರವು, ಕಾರ್ಯನೀತಿಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಕಾಲಕಾಲಕ್ಕೆ ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನ ನೀಡುವ ಮುಂಚೆ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಅವಕಾಶವನ್ನು ನೀಡತಕ್ಕದ್ದು.

(2) ಪ್ರಶ್ನೆಯು ಕಾರ್ಯನೀತಿ ಪ್ರಶ್ನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**49. ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ರಾಜ್ಯ ಜೀವ ವೈವಿಧ್ಯ ಮಂಡಳಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ, ರಾಜ್ಯ ಸರ್ಕಾರವು, ಕಾರ್ಯನೀತಿಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಕಾಲಕಾಲಕ್ಕೆ ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ರಾಜ್ಯ ಜೀವ ವೈವಿಧ್ಯ ಮಂಡಳಿಗೆ, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನ ನೀಡುವ ಮುಂಚೆ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಅವಕಾಶವನ್ನು ನೀಡತಕ್ಕದ್ದು.

(2) ಪ್ರಶ್ನೆಯು ಕಾರ್ಯನೀತಿ ಪ್ರಶ್ನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**50. ವಿವಾದಗಳ ಇತ್ಯರ್ಥ.–** (1) ಸಂದರ್ಭಾನುಸಾರ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ ಮತ್ತು ರಾಜ್ಯ ಜೀವ ವೈವಿಧ್ಯ ಮಂಡಳಿಯ ನಡುವೆ ವಿವಾದ ಉಂಟಾದಲ್ಲಿ, ಸದರಿ ಪ್ರಾಧಿಕಾರ ಅಥವಾ ಮಂಡಳಿಯು ಕೇಂದ್ರ ಸರ್ಕಾರಕ್ಕೆ ನಿಯಮಿಸಬಹುದಾದಂಥ ಸಮಯದೊಳಗೆ ಅಪೀಲನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಪ್ರತಿಯೊಂದು ಅಪೀಲು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು.

(3) ಅಪೀಲನ್ನು ವಿಲೆ ಮಾಡುವ ಬಗೆಗಿನ ಕಾರ್ಯವಿಧಾನವು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಪೀಲನ್ನು ವಿಲೆ ಮಾಡುವ ಮುಂಚೆ, ಪಕ್ಷಕಾರರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(4) ರಾಜ್ಯ ಜೀವ ವೈವಿಧ್ಯ ಮಂಡಳಿಗಳ ನಡುವೆ ವಿವಾದ ಉಂಟಾದಲ್ಲಿ, ಅದನ್ನು ಕೇಂದ್ರ ಸರ್ಕಾರವು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(5) (4)ನೇ ಉಪಪ್ರಕರಣದ ಮೇರೆಗೆ ಯಾವುದೇ ವಿವಾದವನ್ನು ನ್ಯಾಯನಿರ್ಣಯ ಮಾಡುವಾಗ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಸ್ವಾಭಾವಿಕ ನ್ಯಾಯದ ತತ್ವಗಳಿಂದ ಮಾರ್ಗದರ್ಶಿಯಾಗಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(6) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯ ಹಾಜರಾತಿಗೆ ಸಮನು ನೀಡುವುದು ಮತ್ತು ಹಾಜರಾತಿಗೆ ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ದಸ್ತಾವೇಜುಗಳನ್ನು ಪತ್ತೆಮಾಡಬೇಕೆಂದು ಮತ್ತು ಹಾಜರುಪಡಿಸಬೇಕೆಂದು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್‌ಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರನ್ನು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸುವುದಕ್ಕಾಗಿ ಕಮಿಷನ್ನುಗಳನ್ನು ಹೊರಡಿಸುವುದು;

(ಇ) ತನ್ನ ನಿರ್ಣಯಗಳನ್ನು ಪುನರವಲೋಕಿಸುವುದು;

(ಎಫ್) ಹಾಜರಾಗಲು ತಪ್ಪಿದ್ದಕ್ಕಾಗಿ ಅರ್ಜಿಯನ್ನು ವಜಾಗೊಳಿಸುವುದು ಅಥವಾ ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಜಿ) ಹಾಜರಾಗಲು ತಪ್ಪಿದ್ದಕ್ಕಾಗಿ ಯಾವುದೇ ಅರ್ಜಿಯನ್ನು ವಜಾ ಮಾಡಿರುವ ಆದೇಶವನ್ನು ಅಥವಾ ಅದು ಏಕಪಕ್ಷೀಯವಾಗಿ ಮಾಡಿರುವ ಆದೇಶವನ್ನು ರದ್ದುಪಡಿಸುವುದು;

(ಹೆಚ್) ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

(7) ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಮುಂದಿರುವ ಪ್ರತಿಯೊಂದು ವ್ಯವಹರಣೆಯನ್ನು, ಭಾರತ ದಂಡ ಸಂಹಿತೆ (1860ರ 45)ಯ 193ನೇ ಪ್ರಕರಣದ ಮತ್ತು 228ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಮತ್ತು 196ನೇ ಪ್ರಕರಣದ ಉದ್ದೇಶಕ್ಕಾಗಿ ನ್ಯಾಯಿಕ ವ್ಯವಹರಣೆ ಎಂದು ಭಾವಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಎಲ್ಲ ಉದ್ದೇಶಗಳಿಗಾಗಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವನ್ನು ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**51. ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಮತ್ತು ರಾಜ್ಯ ಜೀವ ವೈವಿಧ್ಯ ಮಂಡಳಿಯ ಸದಸ್ಯರು, ಅಧಿಕಾರಿಗಳು, ಮುಂತಾದವರನ್ನು ಲೋಕ ನೌಕರರೆಂದು ಭಾವಿಸುವುದು.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಎಲ್ಲ ಸದಸ್ಯರನ್ನು, ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿದ್ದಾರೆಂದು ತಾತ್ಪರ್ಯವಾಗುವಾಗ ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**52. ಅಪೀಲು.–** ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯ ಯಾವುದೇ ನಿರ್ಧಾರದಿಂದ ಅಥವಾ ಆದೇಶದಿಂದ ಅಥವಾ ನಿರ್ದೇಶನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸಂದರ್ಭಾನುಸಾರ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಂಥ ನಿರ್ಧಾರವನ್ನು ಅಥವಾ ಆದೇಶವನ್ನು ಅವನಿಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಾಕಷ್ಟು ಕಾರಣಗಳಿಂದಾಗಿ ಸದರಿ ಅವಧಿಯೊಳಗೆ ಅಪೀಲು ಸಲ್ಲಿಸಲು ಪ್ರತಿಬಂಧಿತನಾಗಿದ್ದನೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅರವತ್ತು ದಿನಗಳಿಗೆ ಮೀರದ ಹೆಚ್ಚಿನ ಅವಧಿಯೊಳಗಾಗಿ ಅಪೀಲು ಸಲ್ಲಿಸುವುದಕ್ಕೆ ಅವಕಾಶ ನೀಡಬಹುದು:

ಮತ್ತು ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 (2010ರ 19)ರ ಪ್ರಾರಂಭದಂದು ಮತ್ತು ಪ್ರಾರಂಭದಿಂದ ಅನ್ವಯವಾಗತಕ್ಕದ್ದಲ್ಲ:

ಮತ್ತೂ ಪರಂತು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 (2010ರ 19)ರ ಪ್ರಾರಂಭಕ್ಕೆ ಮುಂಚೆ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಅಪೀಲನ್ನು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ 3ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಸ್ಥಾಪಿಸಿರದಿದ್ದರೆ ಹೇಗೆ ವಿಚಾರಣೆ ಮಾಡಲಾಗುತ್ತಿತ್ತೋ ಮತ್ತು ವಿಲೆ ಮಾಡಲಾಗುತ್ತಿತ್ತೋ ಅದೇ ರೀತಿಯಲ್ಲಿ ಉಚ್ಚ ನ್ಯಾಯಾಲಯವು ಅದರ ವಿಚಾರಣೆಯನ್ನು ಮುಂದುವರೆಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

**52ಎ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲು.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 (2010ರ 19)ರ ಪ್ರಾರಂಭದ ದಿನದಂದು ಅಥವಾ ಆ ತರುವಾಯ, ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಪ್ರಯೋಜನದ ಹಂಚಿಕೆ ಬಗೆಗಿನ ಯಾವುದೇ ನಿರ್ಧರಣೆಯಿಂದ ಅಥವಾ ಆದೇಶದಿಂದ ಬಾಧಿತನಾದ

ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ ಉಪಬಂಧಗಳಿಗೆ ಅನುಸಾರವಾಗಿ ಸದರಿ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

**53. ನಿರ್ಧಾರ ಅಥವಾ ಆದೇಶದ ಜಾರಿ.–** ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯು ಮಾಡಿದ ಪ್ರಯೋಜನಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯ ಪ್ರತಿಯೊಂದು ನಿರ್ಧಾರವನ್ನು ಅಥವಾ ಆದೇಶವನ್ನು ಅಥವಾ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಯಾವುದೇ ನಿರ್ಧಾರದ ಅಥವಾ ಆದೇಶದ ವಿರುದ್ಧ ಯಾವುದೇ ಅಪೀಲಿನಲ್ಲಿ ಉಚ್ಚ ನ್ಯಾಯಾಲಯ ಅಥವಾ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಮಾಡಿದ ಆದೇಶವನ್ನು, ಸಂದರ್ಭಾನುಸಾರ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಯಾರೇ ಅಧಿಕಾರಿಯು ಅಥವಾ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರನು ಅಥವಾ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ರಿಜಿಸ್ಟ್ರಾರನು ನೀಡಿದ ಪ್ರಮಾಣಪತ್ರದ ಮೇರೆಗೆ ಸಿವಿಲ್ ನ್ಯಾಯಾಲಯದ ಡಿಕ್ರಿಯೆಂದು ಭಾವಿಸತಕ್ಕದ್ದು ಮತ್ತು ಆ ನ್ಯಾಯಾಲಯದ ಡಿಕ್ರಿ ಎಂಬಂತೆ ಅದೇ ರೀತಿಯಲ್ಲಿ ಅದು ಜಾರಿ ಯೋಗ್ಯವಾಗಿರತಕ್ಕದ್ದು.

*ವಿವರಣೆ.–* ಈ ಪ್ರಕರಣದ ಮತ್ತು 52ನೇ ಪ್ರಕರಣದ ಉದ್ದೇಶಗಳಿಗಾಗಿ "ರಾಜ್ಯ ಜೀವ ವೈವಿಧ್ಯ ಮಂಡಳಿ" ಎಂಬ ಪದಾವಳಿಯು, ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಅಥವಾ ನಿಕಾಯಕ್ಕೆ 22ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಆ ಉಪಪ್ರಕರಣದ ಪರಂತುಕದ ಮೇರೆಗೆ ಪ್ರತ್ಯಾಯೋಜಿಸಲಾಗಿದೆಯೋ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಅಥವಾ ನಿಕಾಯವನ್ನು ಒಳಗೊಳ್ಳುತ್ತದೆ ಮತ್ತು ಈ ಪ್ರಕರಣದ ಮೇರೆಗೆ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಅಥವಾ ನಿಕಾಯಕ್ಕೆ ಸಂಬಂಧಿಸಿದ ಪ್ರಮಾಣಪತ್ರವನ್ನು ಸಂದರ್ಭಾನುಸಾರ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಅಥವಾ ನಿಕಾಯವು ನೀಡತಕ್ಕದ್ದು.

**54. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ವಿರುದ್ಧ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ಅಥವಾ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯ ಯಾರೇ ಸದಸ್ಯನ, ಅಧಿಕಾರಿಯ ಅಥವಾ ನೌಕರರ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**55. ದಂಡನೆಗಳು.–** 3ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ 7ನೇ ಪ್ರಕರಣದ ಮೇರೆಗೆ ಬರುವ ಯಾರೇ ವ್ಯಕ್ತಿ ಅಥವಾ ಸಂಸ್ಥೆಯು, 3ನೇ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 6ನೇ ಪ್ರಕರಣ ಅಥವಾ 7ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ಪ್ರಯತ್ನಿಸಿದರೆ ಅಥವಾ ಉಲ್ಲಂಘಿಸಲು ದುಷ್ಪ್ರೇರಿಸಿದರೆ ಅಂಥ ವ್ಯಕ್ತಿಯು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಂಥ, ಆದರೆ ಐವತ್ತು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ದಂಡವನ್ನು ಸಂದಾಯ ಮಾಡುವುದಕ್ಕೆ ಹೊಣೆಗಾರನಾಗಿರತಕ್ಕದ್ದು, ಆದರೆ ಉಂಟು ಮಾಡಿದ ಹಾನಿಯು ದಂಡದ ಮೊಬಲಗಿಗಿಂತ ಹೆಚ್ಚಾಗಿದ್ದರೆ, ಅಂಥ ಉಂಟಾದ ಹಾನಿಗೆ ತಕ್ಕಂತಹ ದಂಡನೆಯಿಂದ ದಂಡಿತನಾಗತಕ್ಕದ್ದು ಮತ್ತು ಒಂದು ವೇಳೆ ದಂಡ ಪಾವತಿಸಲು ವಿಫಲನಾದರೆ ಅಥವಾ ಉಲ್ಲಂಘನೆಯನ್ನು ಮುಂದುವರೆಸಿದರೆ, ಒಂದು ಕೋಟಿ ರೂಪಾಯಿಗಳನ್ನು ಮೀರದಂತೆ ಹೆಚ್ಚುವರಿ ದಂಡವನ್ನು ವಿಧಿಸಬಹುದು ಮತ್ತು ಅಂಥ ದಂಡವನ್ನು 55ಎ ಪ್ರಕರಣದ ಮೇರೆಗೆ ನೇಮಕಗೊಂಡ ನ್ಯಾಯನಿರ್ಣಯ ಅಧಿಕಾರಿಯು ನಿರ್ಧರಿಸತಕ್ಕದ್ದು.

**55ಎ. ದಂಡಗಳ ಬಗೆಗಿನ ನ್ಯಾಯನಿರ್ಣಯ.–** (1) 55ನೇ ಪ್ರಕರಣದ ಮೇರೆಗೆ ದಂಡಗಳನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆ ನಡೆಸಲು ಮತ್ತು ಹಾಗೆ ನಿರ್ಧರಿಸಿದ ದಂಡವನ್ನು ವಿಧಿಸಲು

ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ಅಥವಾ ರಾಜ್ಯ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ನ್ಯಾಯನಿರ್ಣಯ ಅಧಿಕಾರಿಯಾಗಿ ನೇಮಕ ಮಾಡಬಹುದು:

ಪರಂತು, ಕೇಂದ್ರ ಸರ್ಕಾರವು, ಅಗತ್ಯವಾಗಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ನ್ಯಾಯನಿರ್ಣಯ ಅಧಿಕಾರಿಗಳಾಗಿ ನೇಮಕ ಮಾಡಬಹುದು.

(2) ವಿಚಾರಣೆಯನ್ನು ನಡೆಸುತ್ತಿರುವಾಗ, ನ್ಯಾಯನಿರ್ಣಯ ಅಧಿಕಾರಿಯ ಅಭಿಪ್ರಾಯದಲ್ಲಿ ವಿಚಾರಣೆಯ ವಸ್ತುವಿಷಯಕ್ಕೆ ಉಪಯೋಗವಾಗಬಹುದಾದ ಅಥವಾ ಅದಕ್ಕೆ ಸುಸಂಗತವಾದ, ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಬಗ್ಗೆ ತಿಳಿದಿರುವ ಯಾರೇ ವ್ಯಕ್ತಿಯು, ಸಾಕ್ಷ್ಯವನ್ನು ನೀಡಲು ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು, ಆತನಿಗೆ ಸಮನು ಮಾಡಲು ಮತ್ತು ಅವನ ಹಾಜರಾತಿಗಾಗಿ ಒತ್ತಾಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ವಿಚಾರಣೆಯ ತರುವಾಯ ನ್ಯಾಯನಿರ್ಣಯ ಅಧಿಕಾರಿಗೆ, ಪ್ರಕರಣಕ್ಕೆ ಸಂಬಂಧಪಟ್ಟ ವ್ಯಕ್ತಿಯು 3ನೇ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 6ನೇ ಪ್ರಕರಣ ಅಥವಾ 7ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ವಿಫಲನಾಗಿದ್ದಾನೆಂದು ಮನದಟ್ಟಾದರೆ, ಅವನು 55ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಸೂಕ್ತವೆಂದು ಭಾವಿಸುವಂಥ ದಂಡನೆಯನ್ನು ವಿಧಿಸಬಹುದು:

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ಅಂಥ ವಿಷಯದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದ ಹೊರತು ಯಾವುದೇ ಅಂಥ ದಂಡನೆಯನ್ನು ವಿಧಿಸತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಮೇರೆಗೆ ನ್ಯಾಯನಿರ್ಣಯ ಅಧಿಕಾರಿಯು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 (2010ರ 19)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಬಾಧಿತನಾದ ವ್ಯಕ್ತಿಯು ನ್ಯಾಯನಿರ್ಣಯ ಅಧಿಕಾರಿಯು ಮಾಡಿದ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

(5) ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು, ಅಪೀಲಿಗೆ ಸಂಬಂಧಿಸಿದ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅದು ಸೂಕ್ತವೆಂದು ಭಾವಿಸುವಂತೆ, ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ, ಅಂಥ ಆದೇಶವನ್ನು ಸ್ಥಿರೀಕರಿಸುವ, ಮಾರ್ಪಡಿಸುವ ಅಥವಾ ರದ್ದುಗೊಳಿಸುವ ಆದೇಶವನ್ನು ಮಾಡಬಹುದು.

**55ಬಿ. ಪ್ರವೇಶಿಸುವ, ಪರಿಶೀಲಿಸುವ, ಸಮೀಕ್ಷೆ ಮಾಡುವ ಅಧಿಕಾರ, ಇತ್ಯಾದಿ.–** ಕೇಂದ್ರ ಸರ್ಕಾರದ ಮೂಲಕ ಅಧಿಕಾರ ಪಡೆದ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಯು, ಪರಿಶೀಲನೆ, ಸಮೀಕ್ಷೆ ಅಥವಾ ಯಾವುದೇ ಅಂಥ ಚಟುವಟಿಕೆಯನ್ನು ಕೈಗೊಳ್ಳುವ ಉದ್ದೇಶಗಳಿಗಾಗಿ, ಈ ಮುಂದಿನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಹೊಂದಬಹುದು, ಎಂದರೆ:–

(ಎ) ಯಾವುದೇ ಭೂಮಿ, ವಾಹನ ಅಥವಾ ಆವರಣಗಳನ್ನು ಪ್ರವೇಶಿಸುವ ಮತ್ತು ಪರಿಶೀಲಿಸುವ, ತನಿಖೆ ಮಾಡುವ, ಸಮೀಕ್ಷೆ ನಡೆಸುವ ಹಾಗೂ ಮಾಹಿತಿ ಸಂಗ್ರಹಿಸುವ ಮತ್ತು ಅದರ ನಕ್ಷೆ ತಯಾರಿಸುವ ಮತ್ತು ಸಾಮಗ್ರಿಗಳನ್ನು ಮತ್ತು ದಾಖಲೆಗಳನ್ನು ವಶಪಡಿಸಿಕೊಳ್ಳುವ ಅಧಿಕಾರ;

(ಬಿ) ಸಾಕ್ಷ್ಯಗಳು ಮತ್ತು ದಸ್ತಾವೇಜುಗಳು ಮತ್ತು ಭೌತಿಕ ಪದಾರ್ಥಗಳನ್ನು ಹಾಜರುಪಡಿಸುವುದು ಸೇರಿದಂತೆ ಯಾರೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸುವ ಸಿವಿಲ್ ನ್ಯಾಯಾಲಯದ ಅಧಿಕಾರಗಳು;

(ಸಿ) ಶೋಧನಾ ವಾರಂಟನ್ನು ಹೊರಡಿಸುವ ಅಧಿಕಾರ;

(ಡಿ) ವಿಚಾರಣೆಯನ್ನು ನಡೆಸುವ ಮತ್ತು ಅಂಥ ವಿಚಾರಣೆಯು ನಡೆಯುತ್ತಿರುವಾಗ ಸಾಕ್ಷ್ಯವನ್ನು ಪಡೆಯುವ ಮತ್ತು ದಾಖಲಿಸುವ ಅಧಿಕಾರ;

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳು.

**56. ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ರಾಜ್ಯ ಜೀವ ವೈವಿಧ್ಯ ಮಂಡಳಿಗಳು ನೀಡಿದ ನಿರ್ದೇಶನ ಅಥವಾ ಆದೇಶಗಳ ಉಲ್ಲಂಘನೆಗಾಗಿ ದಂಡ.–** ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವು, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಅಥವಾ ರಾಜ್ಯ ಜೀವ ವೈವಿಧ್ಯ ಮಂಡಳಿಯು ನೀಡಿದ ಯಾವುದೇ ನಿರ್ದೇಶನ ಅಥವಾ ಮಾಡಿದ ಯಾವುದೇ ಆದೇಶವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದ್ದು, ಅದಕ್ಕೆ ಈ ಅಧಿನಿಯಮದ ಮೇರೆಗೆ ಯಾವುದೇ ಶಿಕ್ಷೆಯನ್ನು ಪ್ರತ್ಯೇಕವಾಗಿ ಉಪಬಂಧಿಸಿರದಿದ್ದಲ್ಲಿ, ಅವನು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ನಿರಂತರ ಉಲ್ಲಂಘನೆಯ ಸಂದರ್ಭದಲ್ಲಿ, ಅಂಥ ಅಪರಾಧವು ಮುಂದುವರೆದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**57. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ಅಥವಾ ಉಲ್ಲಂಘನೆಯು ನಡೆದ ಸಮಯದಲ್ಲಿ, ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ಅಥವಾ ಉಲ್ಲಂಘನೆಯ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ, ಅಂಥ ಯಾರೇ ವ್ಯಕ್ತಿಯು, ಅಂಥ ಅಪರಾಧವು ಅಥವಾ ಉಲ್ಲಂಘನೆಯು ತನ್ನ ತಿಳಿವಳಿಕೆಗೆ ಬಾರದೆ ನಡೆದಿದೆ ಎಂದು ಅಥವಾ ಅಂಥ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ರುಜುವಾತುಪಡಿಸಿದರೆ ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧ ಅಥವಾ ಉಲ್ಲಂಘನೆಯನ್ನು ಆ ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆ ಎಂದು ರುಜುವಾತಾದಲ್ಲಿ ಅಥವಾ ಅದನ್ನು ಅವನ ಯಾವುದೇ ನಿರ್ಲಕ್ಷ್ಯತೆಗೆ ಆರೋಪಿಸಬಹುದಾಗಿರುವಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಅಥವಾ ಉಲ್ಲಂಘನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

*ವಿವರಣೆ.–* ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ, ಆ ಫರ್ಮಿನ ಪಾಲುದಾರ.

**58.** [ಬಿಟ್ಟುಬಿಡಲಾಗಿದೆ.]

**59. ಈ ಅಧಿನಿಯಮವು ಇತರ ಅಧಿನಿಯಮಗಳ ಜೊತೆಗೆ ಪರಿಣಾಮಕಾರಿಯಾಗಿರುವುದು.–** ಈ ಅಧಿನಿಯಮದ ಉಪಬಂಧಗಳು ಅರಣ್ಯಗಳಿಗೆ ಅಥವಾ ವನ್ಯಜೀವಿಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜತೆಗೆ ಇರತಕ್ಕದ್ದೇ ಹೊರತು ಅದನ್ನು ಅಲ್ಪೀಕರಿಸತಕ್ಕದ್ದಲ್ಲ.

**59ಎ. ಈ ಅಧಿನಿಯಮವು ಕೆಲವು ವ್ಯಕ್ತಿಗಳಿಗೆ ಅನ್ವಯವಾಗದಿರುವುದು.–** ಸಂಸತ್ತು ಅಧಿನಿಯಮಿತಿಗೊಳಿಸಿದ ಸಸ್ಯ ಪ್ರಭೇದಗಳ ಸಂರಕ್ಷಣೆಗೆ ಸಂಬಂಧಿಸಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ಅನುಮೋದನೆಯನ್ನು ಅಥವಾ ಯಾವುದೇ ಹಕ್ಕನ್ನು ನೀಡಲಾಗಿರುವ ಯಾರೇ ವ್ಯಕ್ತಿಗೆ, ಆ ಅಧಿನಿಯಮದ ಮೇರೆಗೆ ನೀಡಲಾದಂಥ ಅನುಮೋದನೆಗಳು ಅಥವಾ ಹಕ್ಕುಗಳು ಈ ಅಧಿನಿಯಮದ ಮೇರೆಗೆ ಅದೇ ರೀತಿಯ ಅನುಮೋದನೆಗಳು ಅಗತ್ಯವಾಗದಿರುವಷ್ಟರಮಟ್ಟಿಗೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**60. ರಾಜ್ಯ ಸರ್ಕಾರಗಳಿಗೆ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ವಿನಿಯಮನ ಅಥವಾ ಆದೇಶದ ಯಾವುದೇ ಉಪಬಂಧಗಳನ್ನು ರಾಜ್ಯದಲ್ಲಿ ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

**61. ಅಪರಾಧಗಳ ಸಂಜ್ಞೇಯತೆ.–** ಯಾವುದೇ ನ್ಯಾಯಾಲಯವು,–

(ಎ) ಕೇಂದ್ರ ಸರ್ಕಾರವು ಅಥವಾ ಆ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರವು ಅಥವಾ ಅಧಿಕಾರಿಯು; ಅಥವಾ

(ಬಿ) ಕೇಂದ್ರ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಅಥವಾ ಈ ಹಿಂದೆ ಹೇಳಿದಂತೆ ಅಧಿಕೃತಗೊಳಿಸಲಾದ ಅಧಿಕಾರಿಗೆ, ಅಂಥ ಅಪರಾಧದ ಬಗ್ಗೆ ಮತ್ತು ದೂರು ಸಲ್ಲಿಸುವ ತನ್ನ ಇಚ್ಛೆಯ ಬಗ್ಗೆ, ನಿಯಮಿಸಲಾದ ರೀತಿಯಲ್ಲಿ, ಮೂವತ್ತು ದಿನಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ನೀಡಿದಂಥ ಯಾರೇ ವ್ಯಕ್ತಿ ಅಥವಾ ಪ್ರಯೋಜನದ ಯಾರೇ ಕ್ಲೇಮುದಾರನು

– ಈ ಅಧಿನಿಯಮದ ಮೇರೆಗೆ ಲಿಖಿತ ದೂರನ್ನು ಸಲ್ಲಿಸಿದ ಹೊರತು ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**62. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮೂಲದ ಬಗ್ಗೆ ಪ್ರಮಾಣಪತ್ರವನ್ನು ಪಡೆಯುವ ರೀತಿ;

(ಎಎ) 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವ ಪುಸ್ತಕಗಳ ಆಧಾರದ ಮೇಲೆ ಮೂಲದ ಬಗ್ಗೆ ಪ್ರಮಾಣಪತ್ರವನ್ನು ನೀಡಲಾಗುವುದೋ, ಅಂಥ ಪುಸ್ತಕಗಳನ್ನು ನಿರ್ವಹಿಸುವ ರೀತಿ ಮತ್ತು ಅಂಥ ಪ್ರಮಾಣಪತ್ರವನ್ನು ನೀಡುವ ರೀತಿ;

(ಎಬಿ) 9ನೇ ಪ್ರಕರಣದ ಮೇರೆಗೆ ಅಧ್ಯಕ್ಷ, ಸದಸ್ಯ–ಕಾರ್ಯದರ್ಶಿ ಮತ್ತು ಇತರ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 10ನೇ ಪ್ರಕರಣದ ಮೇರೆಗೆ ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ಬಿಎ) ಸದಸ್ಯ–ಕಾರ್ಯದರ್ಶಿಯು ನಿರ್ವಹಿಸಬೇಕಾದ ಇತರ ಪ್ರಕಾರ್ಯಗಳು;

(ಸಿ) ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಕಾರ್ಯವಿಧಾನ;

(ಡಿ) 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೆಲವು ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದ ಅರ್ಜಿಯ ನಮೂನೆ ಮತ್ತು ಶುಲ್ಕಗಳ ಸಂದಾಯ;

(ಇ) 19ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮತ್ತು ಫೀಜುಗಳನ್ನು ಸಂದಾಯ ಮಾಡುವ ನಮೂನೆ ಮತ್ತು ರೀತಿ;

(ಇಎ) 20ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿ ನಮೂನೆ ಮತ್ತು ಫೀಜುಗಳ ಸಂದಾಯ;

(ಎಫ್) 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಜೈವಿಕ ಸಂಪನ್ಮೂಲ ಅಥವಾ ಜ್ಞಾನವನ್ನು ವರ್ಗಾಯಿಸುವುದಕ್ಕೆ ಸಂಬಂಧಿಸಿದ ಅರ್ಜಿಯ ನಮೂನೆ ಮತ್ತು ರೀತಿ;

(ಜಿ) 28ನೇ ಪ್ರಕರಣದ ಮೇರೆಗೆ, ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಪ್ರತಿಯೊಂದು ಹಣಕಾಸು ವರ್ಷದ ಯಾವ ಕಾಲದಲ್ಲಿ ಸಿದ್ಧಪಡಿಸಬೇಕೋ ಆ ನಮೂನೆ ಮತ್ತು ಆ ಕಾಲ ಮತ್ತು ಯಾವ ದಿನಾಂಕಕ್ಕೆ ಮುಂಚೆ ಲೆಕ್ಕಪರಿಶೋಧಿತ ಪ್ರತಿಯನ್ನು, ಲೆಕ್ಕಪರಿಶೋಧಕರ ವರದಿಯ ಜೊತೆಗೆ ಒದಗಿಸಬೇಕೋ ಆ ದಿನಾಂಕ;

(ಎಚ್) 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಕ್ಕದ ವಾರ್ಷಿಕ ವಿವರಣಾಪಟ್ಟಿಯನ್ನು ಯಾವ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದೋ ಆ ನಮೂನೆ;

(ಐ) 50ನೇ ಪ್ರಕರಣದ ಮೇರೆಗೆ ಅಪೀಲನ್ನು ಯಾವ ಕಾಲದೊಳಗೆ ಮತ್ತು ಯಾವ ನಮೂನೆಯಲ್ಲಿ ಸಲ್ಲಿಸಬೇಕೋ ಆ ಕಾಲ ಮತ್ತು ಆ ನಮೂನೆ, ಅಪೀಲನ್ನು ವಿಲೆ ಮಾಡುವ ಮತ್ತು ನ್ಯಾಯನಿರ್ಣಯ ಮಾಡುವ ಕಾರ್ಯವಿಧಾನ;

(ಜೆ) 50ನೇ ಪ್ರಕರಣದ (6)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ಯಾವ ಹೆಚ್ಚುವರಿ ವಿಷಯದಲ್ಲಿ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದೋ, ಆ ಹೆಚ್ಚುವರಿ ವಿಷಯಗಳು;

(ಜೆಎ) 55ಎ ಪ್ರಕರಣದ ಮೇರೆಗೆ ನ್ಯಾಯನಿರ್ಣಯ ಅಧಿಕಾರಿಯು ವಿಚಾರಣೆಯನ್ನು ನಡೆಸುವ ರೀತಿ;

(ಜೆಬಿ) 55ಬಿ ಪ್ರಕರಣದ (ಇ) ಖಂಡದ ಮೇರೆಗಿನ ಇತರ ಅಧಿಕಾರ;

(ಕೆ) 61ನೇ ಪ್ರಕರಣದ (ಬಿ) ಖಂಡದ ಮೇರೆಗೆ ನೋಟೀಸನ್ನು ನೀಡುವ ರೀತಿ;

(ಎಲ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ

ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಭಾದಕವನ್ನುಂಟು ಮಾಡತಕ್ಕದ್ದಲ್ಲ.

**63. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಅಂಥ ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 23ನೇ ಪ್ರಕರಣದ (ಸಿ) ಖಂಡದ ಮೇರೆಗೆ ರಾಜ್ಯ ಜೀವ ವೈವಿಧ್ಯ ಮಂಡಳಿಯು ನಿರ್ವಹಿಸಬೇಕಾದ ಇತರ ಪ್ರಕಾರ್ಯಗಳು;

(ಬಿ) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಪೂರ್ವ ಸೂಚನೆಯನ್ನು ನೀಡತಕ್ಕದ್ದೋ ಆ ನಮೂನೆ;

(ಸಿ) 33ನೇ ಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಪ್ರತಿಯೊಂದು ಹಣಕಾಸು ವರ್ಷದ ಯಾವ ಕಾಲದಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದೋ ಆ ನಮೂನೆ ಮತ್ತು ಕಾಲ;

(ಡಿ) 34ನೇ ಪ್ರಕರಣದ ಮೇರೆಗೆ ರಾಜ್ಯ ಜೀವ ವೈವಿಧ್ಯ ಮಂಡಳಿಯ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾದ ಮತ್ತು ಲೆಕ್ಕಪರಿಶೋಧನೆ ಮಾಡಬೇಕಾದ ರೀತಿ ಮತ್ತು ಯಾವ ದಿನಾಂಕಕ್ಕೆ ಮುಂಚೆ ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ಪ್ರತಿಯನ್ನು ಹಾಗೂ ಅದರ ಮೇಲಿನ ಲೆಕ್ಕಪರಿಶೋಧಕರ ವರದಿಯನ್ನು ಒದಗಿಸಬೇಕೋ ಆ ದಿನಾಂಕ;

(ಇ) 37ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಪಾರಂಪರಿಕ ತಾಣಗಳ ನಿರ್ವಹಣೆ ಮತ್ತು ಸಂರಕ್ಷಣೆ:

(ಇಎ) 41ನೇ ಪ್ರಕರಣದ (1ಬಿ) ಉಪಪ್ರಕರಣದ ಮೇರೆಗೆ ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಸಂರಚನೆ;

(ಎಫ್) 44ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಳೀಯ ಜೀವ ವೈವಿಧ್ಯ ನಿಧಿಯ ನಿರ್ವಹಣೆ ಮತ್ತು ಅಭಿರಕ್ಷೆಯ ರೀತಿ ಮತ್ತು ಯಾವ ಉದ್ದೇಶಕ್ಕಾಗಿ ಅಂಥ ನಿಧಿಯನ್ನು ವಿನಿಯೋಗಿಸಬೇಕೋ ಆ ಉದ್ದೇಶಗಳು;

(ಜಿ) 45ನೇ ಪ್ರಕರಣದ ಮೇರೆಗೆ ಪ್ರತಿಯೊಂದು ಹಣಕಾಸು ವರ್ಷದ ಅವಧಿಯಲ್ಲಿ ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದಲ್ಲಿ ಸಿದ್ಧಪಡಿಸಬೇಕೋ ಆ ನಮೂನೆ ಮತ್ತು ಕಾಲ;

(ಹೆಚ್) 46ನೇ ಪ್ರಕರಣದ ಮೇರೆಗೆ ಸ್ಥಳೀಯ ಜೀವ ವೈವಿಧ್ಯ ನಿಧಿಯ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾದ ಮತ್ತು ಲೆಕ್ಕಪರಿಶೋಧನೆ ಮಾಡಿಸಬೇಕಾದ ರೀತಿ ಮತ್ತು ಯಾವ ದಿನಾಂಕಕ್ಕೆ ಮುಂಚೆ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯನ್ನು ಹಾಗೂ ಅದರ ಮೇಲಿನ ಲೆಕ್ಕಪರಿಶೋಧಕನ ವರದಿಯನ್ನು ಒದಗಿಸಬೇಕೋ ಆ ದಿನಾಂಕ;

(ಐ) ನಿರ್ದಿಷ್ಟಪಡಿಸಬೇಕಾದ ಅಥವಾ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ, ಅದರ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನಮಂಡಲವು ಒಂದು ಸದನವನ್ನು ಒಳಗೊಂಡಿರುವಲ್ಲಿ, ಆ ಸದನದ ಮುಂದೆ ಮಂಡಿಸತಕ್ಕದ್ದು.

**64. ವಿನಿಯಮಗಳನ್ನು ರಚಿಸಲು ಅಧಿಕಾರ.–** ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯನ್ನು ಪಡೆದು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ವಿನಿಯಮಗಳನ್ನು ರಚಿಸಬಹುದು.

**65. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ಆದೇಶದ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಹಾಗೆ ತೊಂದರೆಯನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

********